ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Medical Institution, Government of Karnataka )
SRI CHAMARAJENDRA HOSPITAL CAMPUS, HASSAN-573201
Website: www.hims-hassan.org, Phone/Fax No.08172-231699/ 231599 , Email: directorhims@yahoo.com

# 17 ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ದಿನಾಂಕ: 24–06–2017ನೇ ಶನಿವಾರ,

ಮಧ್ಯಾಹ್ನ: 3–30ಗಂಟೆಗೆ

:ಸ್ಥಳ:

ಕೊಠಡಿ ಸಂಖ್ಯೆ: 601, 6ನೇ ಮಹಡಿ, 4ನೇ ಹಂತ,

ಬಹುಮಹಡಿ ಕಟ್ಟಡ, ಬೆಂಗಳೂರು.

ಹಾಞಹಾಞ

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ
HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN-573201
Website: www.hims-hassan.org Phone/Fax No.08172-231699 Email:directorhims@yahoo.com

# 17ನೇ ಆರ್ಥಿಕ ಸಮಿತಿ ಸಭೆಯ ಸಭಾ ನಡವಳಿಗಳು

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 17ನೇ ಆರ್ಥಿಕ ಸಮಿತಿ ಸಭೆಯು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ, ಹಿಮ್ಸ್ ಹಾಸನ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:24-06-2017ರಂದು ಶನಿವಾರ ಮಧ್ಯಾಹ್ನ: 3.30ಗಂಟೆಗೆ ಕೊಠಡಿ ಸಂಖ್ಯೆ:601, 6ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವಿಧಿ, ಬೆಂಗಳೂರು ಇಲ್ಲಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:10** **ಹಾಜರಿದ್ದ ಸದಸ್ಯರ ಸಂಖ್ಯೆ:09**

| | | | |
|---|---|---|---|
| 1 | ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 2 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 3 | ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 4 | ಮಾನ್ಯ ಸರ್ಕಾರದ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, 4ನೇ ಹಂತ, ಬೆಂಗಳೂರು | ಸದಸ್ಯರು | ಹಾಜರಿರುವುದಿಲ್ಲ |
| 5 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು | ಸದಸ್ಯರು | ಹಾಜರಿರುತ್ತಾರೆ |
| 6 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 7 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 8 | ಪ್ರಾಂಶುಪಾಲರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 9 | ವೈದ್ಯಕೀಯ ಅಧೀಕ್ಷಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿರುತ್ತಾರೆ |
| 10 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:14-02-2017ರಂದು ನಡೆದ 16ನೇ ಆರ್ಥಿಕ ಸಮಿತಿ ಸಭೆಯ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದರ ಬಗ್ಗೆ. | ದಿನಾಂಕ:14-02-2017ರಂದು ನಡೆದ 16ನೇ ಆರ್ಥಿಕ ಸಮಿತಿ ಸಭೆಯಲ್ಲಿ 25 ವಿಷಯಗಳ ಬಗ್ಗೆ ಚರ್ಚಿಸಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ದಿನಾಂಕ:15-3-2017ರಂದು ನಡೆದ ಸಂಸ್ಥೆಯ 29ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಸಂಸ್ಥೆಯಿಂದ ತೆಗೆದುಕೊಂಡ ಕ್ರಮಗಳ ಅನುಪಾಲನಾ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ಸಭೆಯ ಅನುಪಾಲನಾ ವರದಿಯನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |
| 2 | 2017-18ನೇ ಸಾಲಿಗೆ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ವಿವಿಧ ಲೆಕ್ಕ-ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನದಲ್ಲಿ ವೇತನಗಳು, ಭತ್ಯೆ, ಔಷಧಿ, ರಾಸಾಯನಿಕಗಳು ಹಾಗೂ ಇತರೆ ಖರ್ಚು ವೆಚ್ಚಗಳನ್ನು ಭರಿಸುವ ಬಗ್ಗೆ. | 2017-18ನೇ ಸಾಲಿಗೆ ಹಿಮ್ಸ್ ಸಂಸ್ಥೆಗೆ ಸರ್ಕಾರದಿಂದ ವಿವಿಧ ಲೆಕ್ಕ ಶೀರ್ಷಿಕೆಯಡಿ ನಿಗದಿಯಾಗಿರುವ ಅನುದಾನದ ವೆಚ್ಚಗಳನ್ನು ಭರಿಸುವ ಬಗ್ಗೆ ಸಭೆಯಲ್ಲಿ ಸವಿವರವಾಗಿ ಚರ್ಚಿಸಲಾಯಿತು.<br>ಸಂಸ್ಥೆಯ ನಿರ್ದೇಶಕರು ಹಿಮ್ಸ್ ಸಂಸ್ಥೆಗೆ 2017-18ನೇ ಸಾಲಿಗೆ ಸಿಬ್ಬಂದಿ ವೇತನಗಳು, ಭತ್ಯೆ, ಔಷಧಿ, ರಾಸಾಯನಿಕಗಳು, ಉಪಕರಣಗಳು, ಸಿವಿಲ್ ಕಾಮಗಾರಿಗಳು, ಹಾಗೂ ಇತರೆ ಖರ್ಚುಗಳು ಸೇರಿದಂತೆ ವಿವಿಧ ಲೆಕ್ಕ - ಶೀರ್ಷಿಕೆಯಡಿ ರೂ.17813.56 ಅನುದಾನವನ್ನು ನಿಗದಿಪಡಿಸಿಕೊಡುವಂತೆ ಮುಂಗಡ ಆಯಾ-ವ್ಯಯ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಸಂಸ್ಥೆಗೆ 2017-18ನೇ ಸಾಲಿಗೆ ರೂ.5016.00 ಲಕ್ಷಗಳ ಅನುದಾನ ಮಾತ್ರ ನಿಗದಿಯಾಗಿರುವುದರಿಂದ ಪ್ರಸ್ತುತ ಸಾಲಿಗೆ ತೀವ್ರ ಅನುದಾನ ಕೊರತೆಯಾಗುತ್ತದೆಂದು ತಿಳಿಸುತ್ತಾ ಉದಾಹರಣೆಗೆ ಸಂಸ್ಥೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನಕ್ಕೆ ಸುಮಾರು ರೂ.4820.00 ಲಕ್ಷಗಳ ಅನುದಾನ ಅವಶ್ಯಕವಿದ್ದು ಸರ್ಕಾರದಿಂದ ಸಿಬ್ಬಂದಿ ವೇತನಕ್ಕಾಗಿ ರೂ.3763.00 ಲಕ್ಷಗಳ ಅನುದಾನ ನಿಗದಿಯಾಗಿದ್ದು ವೇತನದ ವಿಷಯದಲ್ಲಿಯೇ ಸುಮಾರು ರೂ. 1057.00 ಲಕ್ಷಗಳ ಅನುದಾನ ಕೊರತೆಯಾಗಿರುತ್ತದೆ.<br>ಇದಲ್ಲದೆ ಎಮ್.ಸಿ.ಐ. ನಿಯಮಾನುಸಾರ ಕೈಗೊಳ್ಳಬೇಕಾದ ಕಾಮಗಾರಿಗಳು, ಉಪಕರಣಗಳು ಹಾಗೂ ಇತರೆ ವೆಚ್ಚಗಳಿಗೆ ಅಗತ್ಯವಿರುವ ಅನುದಾನಕ್ಕೆ ಹಿಂದಿನ ಸಾಲಿನಿಂದಲೂ ಆಯಾ-ವ್ಯಯ ಮುಂಗಡದಲ್ಲಿ ಕೋರುತ್ತಾ ಬರಲಾಗಿದ್ದರೂ ಸಹ ಅಗತ್ಯ ಅನುದಾನ ಸರ್ಕಾರದಿಂದ ಬಿಡುಗಡೆಯಾಗದ ಕಾರಣ ಉದ್ದೇಶಿತ ಯೋಜನೆಗಳನ್ನು ರೂಪಿಸಲು ಹಾಗೂ ಅವಶ್ಯಕ ಉಪಕರಣಗಳನ್ನು ಖರೀದಿಸಲು ಕಷ್ಟಕರವಾಗುತ್ತಿದೆಂದು ತಿಳಿಸಿ ಪ್ರಸ್ತುತ ವರ್ಷದಲ್ಲಿಯು ಸಹ ಅನುದಾನದ ಕೊರತೆಯುಂಟಾಗುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ 2017-18ನೇ ಸಾಲಿಗೆ ಅತಿ ಅವಶ್ಯಕವಿರುವ ವೆಚ್ಚಗಳಿಗೆ ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಸಂಸ್ಥೆಯಿಂದ ಸರ್ಕಾರಕ್ಕೆ ಸಲ್ಲಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಿ ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 3 | ಸಂಸ್ಥೆಯ ಹೊಸ ಭೋದಕ ಆಸ್ಪತ್ರೆ ಮತ್ತು ಹಳೆಯ ಆಸ್ಪತ್ರೆಗೆ ಹೆಚ್ಚುವರಿಯಾಗಿ | ಸಂಸ್ಥೆಯ ಹೊಸ ಮತ್ತು ಹಳೆಯ ಆಸ್ಪತ್ರೆ ಕಟ್ಟಡಗಳಲ್ಲಿ ಒಟ್ಟು 750 ಹಾಸಿಗೆಗಳ ಸೌಕರ್ಯವಿರುತ್ತದೆ. ಆದರೆ ಬೋಧಕ ಆಸ್ಪತ್ರೆಗೆ ಚಿಕಿತ್ಸೆ ಬರುತ್ತಿರುವ ಒಳ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಸ್ಥಳಾವಕಾಶ ಇರುವಲ್ಲಿ ಮಂಚಗಳ ಸಂಖ್ಯೆಯನ್ನು ಹೆಚ್ಚಿಸಿ ಒಳ ರೋಗಿಗಳಿಗೆ ಅನುಕೂಲಮಾಡಿಕೊಳ್ಳಲು ಹೆಚ್ಚುವರಿಯಾಗಿ ಅಗತ್ಯವಿರುವ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

Finance Officer
Hassan Institute of Medical Sciences
HASSAN

<table>
<tr><th>ಅಜೆಂಡಾ ಕ್ರ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಅಗತ್ಯವಿರುವ ಪೀಠೋಪಕರಣಗಳನ್ನು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.</td><td>ಪೀಠೋಪಕರಣಗಳನ್ನು ಖರೀದಿಸಿ ಕೊಡುವಂತೆ ವೈದ್ಯಕೀಯ ಅಧೀಕ್ಷಕರು ಸಲ್ಲಿಸಿದ್ದ ಬೇಡಿಕೆ ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.
<table>
<tr><th>ಕ್ರ.ಸಂಖ್ಯೆ</th><th>ಪೀಠೋಪಕರಣಗಳ ವಿವರ</th><th>ಒಟ್ಟು ಪೀಠೋಪಕರಣಗಳ ಸಂಖ್ಯೆ</th><th>ಒಂದಕ್ಕೆ ತಗಲುವ ವೆಚ್ಚ</th><th>ಅಂದಾಜು ವೆಚ್ಚ</th></tr>
<tr><td>1</td><td>Patient Cots</td><td>100</td><td>5000</td><td>5,00,000.00</td></tr>
<tr><td>2</td><td>Bedside Lockers</td><td>200</td><td>3000</td><td>6,00,000.00</td></tr>
<tr><td>3</td><td>3 seater chairs</td><td>200</td><td>8000</td><td>16,00,000.00</td></tr>
<tr><td>4</td><td>Iron racks</td><td>25</td><td>5000</td><td>1,25,000.00</td></tr>
<tr><td colspan="4">ಒಟ್ಟು ಮೊತ್ತ</td><td>28,25,000.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸಾರ್ವಜನಿಕ ರೋಗಿಗಳ ಹಿತದೃಷ್ಟಿಯಿಂದ ವೈದ್ಯಕೀಯ ಅಧೀಕ್ಷಕರು ಕೋರಿರುವಂತೆ ಹೊಸ ಬೋಧಕ ಆಸ್ಪತ್ರೆಗೆ ಅವಶ್ಯಕವಿರುವ ಹೆಚ್ಚುವರಿ ಪೀಠೋಪಕರಣಗಳನ್ನು ಕೆ.ಟಿ.ಟಿ.ಪಿ ನಿಯಮಾನುಸಾರ ಇ–ಟೆಂಡರ್ ಮೂಲಕ ಖರೀದಿಸುವುದೆಂದು ಹಾಗೂ ಈ ವೆಚ್ಚವನ್ನು ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಲ್ಲಿ ಲಭ್ಯವಿರುವ ಮೊತ್ತದಿಂದ ಭರಿಸುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.</td></tr>
<tr><td>4</td><td>ಸಂಸ್ಥೆಯ ವಿವಿಧ ವಿಭಾಗಗಳಿಗೆ ಎಂ.ಸಿ.ಐ ನಿಯಮಾನುಸಾರ 150 ಎಂ.ಬಿ.ಬಿಎಸ್ ವಿದ್ಯಾರ್ಥಿಗಳ ಪ್ರವೇಶಾತಿಗಾಗಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಬೋಧನೆಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಕೆ.ಟಿ.ಟಿ.ಪಿ ನಿಯಮಾನುಸಾರ ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.</td><td>ಹಿಮ್ಸ್ ಸಂಸ್ಥೆಯ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 100 ರಿಂದ 150 ಕ್ಕೆ ಹೆಚ್ಚಿಸುವ ನಿಟ್ಟಿನಲ್ಲಿ ಭಾರತೀಯ ವೈದ್ಯಕೀಯ ಪರಿಷತ್, ನವದೆಹಲಿ, ಇವರು ಅನುಮತಿ ನೀಡಿದ್ದು, ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳ ಪ್ರವೇಶ ಮಿತಿಯನ್ನು 100 ರಿಂದ 150ಕ್ಕೆ ಹೆಚ್ಚಿಸುವ ಸಲುವಾಗಿ ಶೇ.40:60 ಅನುಪಾತದಲ್ಲಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಆಕುಕ 190 ಎಂಪಿಎಸ್ 2016, ಬೆಂಗಳೂರು, ದಿನಾಂಕ:03–04–2017 ಆಡಳಿತಾತ್ಮಕ ಅನುಮೋದನೆ ನೀಡಿ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳ ಸಂಖ್ಯೆಯನ್ನು 100 ರಿಂದ 150ಕ್ಕೆ ಹೆಚ್ಚಿಸಲು ಅಗತ್ಯವಿರುವ ಹುದ್ದೆಗಳ ಮಂಜೂರಾತಿಗಾಗಿ ಹಾಗೂ ಕಾಲೇಜನ್ನು ಮೇಲ್ದರ್ಜೆಗೇರಿಸುವ ಸಂಬಂಧ ಕೈಗೊಳ್ಳಲಾಗುವ ಕಾಮಗಾರಿಯ ಸವಿವರ ಅಂದಾಜು ಪಟ್ಟಿಗೆ ಹಾಗೂ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯುವಂತೆ ಸರ್ಕಾರವು ಆದೇಶ ಹೊರಡಿಸಿರುತ್ತದೆ. ಸರ್ಕಾರದ ಆದೇಶದಂತೆ ಅನುಷ್ಠಾನಗೊಳಿಸಬೇಕಾಗಿರುವ ಕಾಮಗಾರಿಗಳ ಅಂದಾಜು ಪಟ್ಟಿ ಮತ್ತು ದಿನಾಂಕ:14–02–2017ರಂದು ನಡೆದ 16ನೇ ಆರ್ಥಿಕ ಸಮಿತಿ ಸಭೆಯಲ್ಲಿ ಉಪಕರಣ/ಪೀಠೋಪಕರಣಗಳು ಇತ್ಯಾದಿಗಳ ಖರೀದಿಗೆ ಅನುಮೋದನೆ ಪಡೆಯಲಾಗಿದ್ದ ಅಂದಾಜು ಪಟ್ಟಿಯ ಸವಿವರವಾದ ಮಾಹಿತಿಗಳನ್ನು ದಿನಾಂಕ:18–05–2017 ರಂದು ಸರ್ಕಾರಕ್ಕೆ ಏಕಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿರುವ ಮಾಹಿತಿಯನ್ನು ಹಾಗೂ<br>
ಸರ್ಕಾರವು ಎಂ.ಬಿ.ಬಿ.ಎಸ್. ಸೀಟುಗಳ ಸಂಖ್ಯೆಯನ್ನು 100 ರಿಂದ 150ಕ್ಕೆ ಹೆಚ್ಚಿಸಿರುವುದರಿಂದ ವಿದ್ಯಾರ್ಥಿಗಳ ಪಾಠ–ಪ್ರವಚನ ಹಾಗೂ ರೋಗಿಗಳ ಚಿಕಿತ್ಸೆಗೆ ಎಂ.ಸಿ.ಐ. ನಿಯಮಾನುಸಾರ ಅತಿ ಅವಶ್ಯಕವಾಗಿರುವ ಉಪಕರಣಗಳನ್ನು ಅಳವಡಿಸಿಕೊಳ್ಳದೇ ಇದ್ದಲ್ಲಿ ಎಮ್.ಸಿ.ಐ ಮಾನ್ಯತೆ ಪಡೆಯುವುದು ಕಷ್ಟವಾಗಿರುತ್ತದೆಂದು ವಿಭಾಗದ ಮುಖ್ಯಸ್ಥರು ತಿಳಿಸಿ ಅತಿ ಅವಶ್ಯಕವಿರುವ ಉಪಕರಣಗಳು ಮತ್ತು ಪೀಠೋಪಕರಣಗಳ ವಿವರವನ್ನು Specification ಪಟ್ಟಿಯನ್ನು ಹಾಗೂ</td></tr>
</table>



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಅಂದಾಜು ಮೊತ್ತವನ್ನು ಸ್ವಯಂ ದೃಢೀಕರಿಸಿ ಸಲ್ಲಿಸಿದ ಬೇಡಿಕೆ ಪಟ್ಟಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

| ಕ್ರ ಸಂ | ವಿವರ | ಅಂದಾಜು ಮೊತ್ತ |
|---|---|---|
| 01 | **Dept of Anesthesiology,**<br>Anaesthesia Work Station, multipara moniters, Defibrillator, Infusion pump, Syringe pumps, Peripheral Nerve stimulators, Fiber Optic Laryngoscope, Ultrasound Guided nerve locator, ABG Analyzer, Video Assisted Laryngoscope, Adult Manikins. | 1,48,10,000-00 |
| 02 | **Dept of Orthopedics,**<br>Arthoscopy, Arthoplasty Instruments for Hip & Knee, Basic fracture fixation sets, Plaster Cutting requirement (Electric) , | 54,00,000-00 |
| 03 | **Dept of Surgery,**<br>Uroflowmetry, Flexible Video endoscopy, Crstoscope and Resectoscope, Operating Microscope with video monitor, Bronchoscope& Electro surgical Equipments | 1,22,72,300-00 |
| 04 | **Dept of General Medicine,**<br>Light Microscope, Overhead projector, upper GI Endoscope, Colonoscopy, Ultra sound Machine, Fiber optic Bronchoscope, Spiro meter, Microprocessor based spectrometer, & Echocardiography machine | 75,00,000-00 |
| 05 | **Dept of Dermatology,**<br>Derma chair, mesoderm, micro needling RF(Anti aging therapy), Derma lite Dl4, Derma peel gold 4in1, REMI-4T centrifuge (16 Tube capacity), Derma scope for hair and skin analysis, Dermo bration equipment, and Dermatology surgery and laser equipments | 31,20,000-00 |
| 06 | **Dept of Ophthalmology,**<br>Auto refractor with keratometer, Operating Microscope, Specular Microscope, Class B Autoclave, Laminar Flow Hood, and Optical Coherence Tomography. | 68,50,000-00 |
| 07 | **Dept of Anatomy,**<br>Cooling Cabinet, Microscopes Monocular, Anatomy Museum Skeletons and bone sets, specimen Jars, Embalming Machines for cadavers, Meat Cutting machine, and Furniture's | 13,52,000-00 |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|

| | | |
|---|---|---|
| 08 | **Dept of Community Medicine,**<br>Barometer, Comparator, Skin Calipers, incubator, Barometer Aneroid, Lactometer, Breath analyzer, Thermometer, Globe Thermometer, and other Equipments. | 3,86,500-00 |
| 09 | **Dept of Psychiatry,**<br>Rorschah Test, Child apperception Test, Thematic Apperception Test, 8-channel Biofeedback instruments set, Alcohol breath analyzer with printer, Neuro psychological instruments, Lithium analyzer. | 15,95,000-00 |
| 10 | **Dept of Biochemistry,**<br>Hormone analyzer, lithium electrolyte analyzer, | 42,00,000-00 |
| 11 | **Dept of Microbiology,**<br>Anaerobic Apparatus, centrifuge(Remi)Electric high power digital, UV Lamps, Micro meter assorted ,Lab equipments & furniture | 4,79,700-00 |
| 12 | **Dept of Pathology,**<br>Rotary Microtome, Automatic tissue processor, Microscope monocular with oil immersion lens for students, Hemocytometers with RBC&WBC pipettes, Sahils Haemoglobinometer, Cryostat and Binocular microscopes. | 28,63,550-00 |
| 13 | **Dept of Dentistry,**<br>OPG X-ray Machine, Scanner and projector. | 17,40,000-00 |
| 14 | Demo Room Furniture's, Library furniture's & office furniture's for Biochemistry dept, Physiology dept, pediatrics dept, Pathology dept and other Departments | 20,00,000-00 |
| | **Total** | **6,45,69,050-00** |

ಎಮ್.ಸಿ.ಐ. ನಿಯಮಾನುಸಾರ 150 ವಿದ್ಯಾರ್ಥಿಗಳ ಪ್ರವೇಶಾತಿಗೆ ಅವಶ್ಯಕವಿರುವ ಉಪಕರಣಗಳು, ಪೀಠೋಪಕರಣಗಳು ಹಾಗೂ ಇತ್ಯಾದಿ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯ ಆದೇಶ ಬಂದ ನಂತರವೇ ಟೆಂಡರ್ ತೆರೆಯುವುದೆಂದು ಸೂಚನೆ ನೀಡಿ ಅನುಮೋದನೆ ನೀಡಲಾಯಿತು.

| | | |
|---|---|---|
| 5 | ಹಿಮ್ಸ್‌ಸಂಸ್ಥೆಯ ಆವರಣದಲ್ಲಿ ಕೊಳವೆ ಬಾವಿ ಕೊರೆದು, ಸಬ್‌ಮರ್ಸಿಬಲ್ ಪಂಪ್ | ಸಂಸ್ಥೆಯ ಕಾಲೇಜು, ಬೋಧಕ ಆಸ್ಪತ್ರೆ, ವಿದ್ಯಾರ್ಥಿಗಳ ವಸತಿ ನಿಲಯ ಮತ್ತು ವೈದ್ಯರ ವಸತಿನಿಲಯಗಳಲ್ಲಿ ನೀರಿನ ಸಮಸ್ಯೆಯನ್ನು ಪ್ರತಿದಿನ ಎದುರಿಸುತ್ತಿದ್ದು, ನಗರ ಸಭೆಯಿಂದಲೂ ಸಹ ಸಮರ್ಪಕವಾಗಿ ನೀರು ಪೂರೈಕೆಯಾಗದೆ ರೋಗಿಗಳು ಮತ್ತು ವಿದ್ಯಾರ್ಥಿಗಳು ತೀವ್ರವಾಗಿ ಸಮಸ್ಯೆಯನ್ನು ಅನುಭವಿಸುತ್ತಿದ್ದರಿಂದ ನೀರಿನ ಅಭಾವವನ್ನು ಶಾಶ್ವತವಾಗಿ |



Finance Officer
Hassan Institute of Medical Sciences
HASSAN

<table>
<tr><th>ಅಜೆಂಡಾ ಕ್ರ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td>ಮತ್ತು ನೀರು ವಿತರಣ ಪೈಪ್ ಅಳವಡಿಸುವ ಕಾಮಗಾರಿ ಕೈಗೊಳ್ಳುವ ಬಗ್ಗೆ.</td><td>ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಭೂ ವಿಜ್ಞಾನ ಇಲಾಖೆಯಿಂದ ಕೊಳವೆ ಬಾವಿ ಕೊರೆಸಲು ಗುರುತು ಮಾಡಿಸಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಹಾಸನರವರ ಮುಖಾಂತರ ಕೊಳವೆ ಬಾವಿಯನ್ನು ಕೊರೆಸಲಾಗಿದ್ದು, ಉತ್ತಮವಾಗಿ ನೀರು ಬಂದಿರುತ್ತದೆ. ಸದರಿ ಕೊಳವೆಬಾವಿಗೆ ಸಬ್‌ಮರ್ಸಿಬಲ್ ಮೋಟರ್ ಅಳವಡಿಸಿ ಕೊಳವೆಬಾವಿಯಿಂದ ಹೊಸ ಮತ್ತು ಹಳೆ ಆಸ್ಪತ್ರೆಯ ಕಟ್ಟಡಕ್ಕೆ ನೀರಿನ ಸಂಪರ್ಕವನ್ನು ಪಡೆಯಲು ಪೈಪ್ ಲೈನ್ ಅಳವಡಿಸುವ ಕಾಮಗಾರಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವಿಭಾಗ, ಹಾಸನ ರವರು ರೂ.6.15 ಲಕ್ಷಗಳಿಗೆ ಅಂದಾಜು ಪಟ್ಟಿ ಸಲ್ಲಿಸಿದ್ದು, ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆಯ ನಿರೀಕ್ಷಣೆಯ ಮೇರೆಗೆ ಸದರಿ ಕೆಲಸವನ್ನು ಪೂರ್ಣಗೊಳಿಸಿ ಬಿಲ್ ಪಾವತಿ ಮಾಡಲಾಗಿದೆಯೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.
<table>
<tr><th>ಕ್ರ.ಸಂ</th><th>ಕಾಮಗಾರಿಯ ವಿವರ</th><th>ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>ಹಿಮ್ಸ್ ಸಂಸ್ಥೆಯ ಹೊಸ ಆಸ್ಪತ್ರೆಯ ಆವರಣದಲ್ಲಿ ಕೊಳವೆ ಬಾವಿ ಕೊರೆದು, ಸಬ್‌ಮರ್ಸಿಬಲ್ ಪಂಪ್ ಮತ್ತು ನೀರು ವಿತರಣ ಪೈಪ್ ಅಳವಡಿಸುವ ಕಾಮಗಾರಿ ಕೈಗೊಳ್ಳುವ ಬಗ್ಗೆ.</td><td>6.15</td></tr>
</table>
ಸಂಸ್ಥೆಯಲ್ಲಿ ಉದ್ಭವಿಸಿದ್ದ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಿಕೊಳ್ಳಲು ಕೊಳವೆ ಬಾವಿಯ ಮೂಲಕ ನೀರಿನ ವ್ಯವಸ್ಥೆ ಮಾಡಿಕೊಂಡಿರುವ ಕಾಮಗಾರಿಯ ಬಾಬ್ತು ರೂ.6.15 ಲಕ್ಷಗಳನ್ನು ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಪಾವತಿಸಿರುವುದನ್ನ ಒಪ್ಪಿ ಅನುಮೋದಿಸಲಾಯಿತು.</td></tr>
<tr><td>6</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಬಾಬ್ತನ್ನು ಪಾವತಿಸಲು ಅನುಮೋದನೆ ಪಡೆಯುವ ಬಗ್ಗೆ.</td><td>ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ವೈದ್ಯಕೀಯ ವೆಚ್ಚ ಮರುಪಾವತಿಸಲು ಸಂಸ್ಥೆಯ ವೈದ್ಯಕೀಯ ಮಂಡಳಿಯಿಂದ ಪರಿಶೀಲಿಸಿ, ಅರ್ಹ ಮೊತ್ತಕ್ಕೆ ಜಿಲ್ಲಾ ಶಸ್ತ್ರಚಿಕಿತ್ಸಕರು ಮೇಲು ಸಹಿಯೊಂದಿಗೆ ದೃಢೀಕರಿಸಿ ಸರ್ಕಾರದ ನಿರ್ದೇಶನದಂತೆ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇಲ್ಲಿಗೆ ಸಲ್ಲಿಸಿದ್ದು, ಸದರಿ ಇಲಾಖೆಯಿಂದ ಶಿಫಾರಸ್ಸು ಮಾಡಿರುವ ಮೊತ್ತವನ್ನು ಸಂಬಂಧಪಟ್ಟ ಕೆಳಕಂಡ ಅಧಿಕಾರಿ/ನೌಕರರುಗಳಿಗೆ ಮರುಪಾವತಿಸಲು ಅನುಮೋದನೆ ನೀಡುವಂತೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.
<table>
<tr><th>ಕ್ರ ಸಂ</th><th>ಹೆಸರು</th><th>ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ</th><th>ಖಾಯಿಲೆಯ ವಿವರ</th><th>ಮರುಪಾವತಿಗಾಗಿ ಸಲ್ಲಿಸಿದ ಮೊತ್ತ</th><th>ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ</th></tr>
<tr><td>1</td><td>ಚಿದಾನಂದ.ಎನ್.ಎಸ್ ಮುಖ್ಯ ಆಡಳಿತಾಧಿಕಾರಿಗಳು</td><td>ಶ್ರೀ ಲಕ್ಷ್ಮಿ ನರ್ಸಿಂಗ್ ಹೋಂ, ಹಾಸನ.</td><td>ಪತ್ನಿಗೆ ಗರ್ಭಿಣಿ ಚಿಕಿತ್ಸೆ ಮತ್ತು ಹೆರಿಗೆ ಚಿಕಿತ್ಸೆ</td><td>55,550.00</td><td>21,600.00</td></tr>
</table></td></tr>
</table>



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | |

| | | | | | |
|---|---|---|---|---|---|
| 2 | ಅಶ್ವಥ್.ಹೆಚ್.ಆರ್ ಪ್ರ.ಶಾ.ತಂ. | ಎಸ್.ಡಿ.ಎಂ ಆಯುರ್ವೇದ ಕಾಲೇಜು , ಹಾಸನ. | ಪತ್ನಿಗೆ Pain & Swelling in the perinial region | 13,451=00 | 10,923=00 |
| 3 | ಅಶ್ವಥ್.ಹೆಚ್.ಆರ್ ಪ್ರ.ಶಾ.ತಂ. | ಎಸ್.ಡಿ.ಎಂ ಅಯುರ್ವೇದ ಕಾಲೇಜು , ಹಾಸನ. | ಪತ್ನಿಗೆ Pain & Swelling in the perinial region | 5,526=00 | 4,888=00 |
| 4 | ಅಶ್ವಥ್.ಹೆಚ್.ಆರ್ ಪ್ರ.ಶಾ.ತಂ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಹಾಸನ | ಪತ್ನಿಗೆ ಚರ್ಮದ ಖಾಯಿಲೆ | 799=00 | 699=00 |
| 5 | ಲೀಲಾವತಿ. ಕೆ ಪ್ರ. ದ. ಸ | ಜನಪ್ರಿಯ ಆಸ್ಪತ್ರೆ ಹಾಸನ | ಗರ್ಭಾವಸ್ಥೆ ಚಿಕಿತ್ಸೆ | 3,300=00 | 1,469=00 |
| 6 | ಎ.ಎ.ವಾಣಿ ಶುಶ್ರೂಷಕಿ | ಸಿ.ಎಸ್.ಐ. ಆಸ್ಪತ್ರೆ ಹಾಸನ | LSCS with Bat dene on | 26,974=00 | 10,016 |
| 7 | ಸಂಧ್ಯಾರಾಣಿ.ಕೆ. ಪ್ರ. ದ. ಸ. | ಮಲ್ನಾಡ್ ನರ್ಸಿಂಗ್ ಹೋಂ ಹಾಸನ. | ಗರ್ಭಾವಸ್ಥೆ ಚಿಕಿತ್ಸೆ | 2,559=00 | 888=00 |
| 8 | ಬಿ.ವಿ. ಮೋಹನ್ ಶುಶ್ರೂಷಕ | ಸಿ.ಎಸ್.ಐ. ಆಸ್ಪತ್ರೆ ಹಾಸನ | ಪತ್ನಿಗೆ LSCS with Bat dene on | 23,671=00 | 10,016=00 |
| 9 | ರಾಮೇಗೌಡ. ಬಿ.ಹೆಚ್. ಗ್ರೂಪ್ ಡಿ. | ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಹಾಸನ | ಪತ್ನಿಗೆ Breast CA | 8,766=00 | 3,805=00 |
| 10 | ರಾಘವೇಂದ್ರ. ಜಿ.ಎಸ್ ಶುಶ್ರೂಷಕ | ಶ್ರೀ ಚಾಮರಾಜೇಂದ್ರ ಆಸ್ಪತ್ರೆ ಹಾಸನ | ತಂದೆ D.M. Hinihd neuro cystocercasis | 13,594=00 | 13,087=00 |
| 11 | ಹೇಮಂತ್‌ಕುಮಾರ್. ಹೆಚ್.ಸಿ ಶುಶ್ರೂಷಕ | ಹೆಚ್.ಸಿ.ಜಿ. ಆಸ್ಪತ್ರೆ, ಬೆಂಗಳೂರು | Chronic Mycloid leukemia | 20,380=00 | 20,102=00 |
| | ಒಟ್ಟು ಮೊತ್ತ | | | | **97,493=00** |

ಸ್ವಾಯತ್ತ ಸಂಸ್ಥೆಗಳ ಅಧಿಕಾರಿ/ನೌಕರರುಗಳ ವೈದ್ಯಕೀಯ ವೆಚ್ಚ ಮರುಪಾವತಿಸಲು ಅನುಮೋದನೆಗಾಗಿ ನಿರ್ದೇಶಕರು, ಆಕುಕ ಇಲಾಖೆ, ಇವರಿಗೆ ಸಲ್ಲಿಸುವ ಪ್ರಸ್ತಾವನೆಗಳ ಬಗ್ಗೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಇದರ ಬದಲಿಗೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯಿಂದ ಒಬ್ಬರು ನೊಡೆಲ್ ಅಧಿಕಾರಿಯನ್ನಾಗಿ ನೇಮಿಸಿ ಅವರಿಂದ ವೈದ್ಯಕೀಯ ವೆಚ್ಚಗಳ ಬಿಲ್‌ಗಳಿಗೆ ಅನುಮೋದನೆ ಪಡೆದು ನಂತರ ಸಂಸ್ಥೆಯ ಆರ್ಥಿಕ ಸಮಿತಿ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಪಾವತಿಸುವುದು ಸೂಕ್ತವೆಂದು

ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ ಸಂಖ್ಯೆ</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td>ಪರಿಗಣಿಸಿ ಈ ಬಗ್ಗೆ ಸರ್ಕಾರದಿಂದ ಸುತ್ತೋಲೆ ಹೊರಡಿಸುವುದೆಂದು ತೀರ್ಮಾನಿಸಿ ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಈ ಕುರಿತು ಕ್ರಮವಹಿಸಲು ಸೂಚಿಸಲಾಯಿತು. ಹಾಲಿ ಸಲ್ಲಿಸಿರುವ ವೈದ್ಯಕೀಯ ವೆಚ್ಚದ ಬಿಲ್‌ನ್ನು ಒಪ್ಪಿ ಸಂಬಂಧಿತ ನೌಕರರುಗಳಿಗೆ ಮರು–ಪಾವತಿಸುವುದೆಂದು ತೀರ್ಮಾನಿಸಲಾಯಿತು.</td></tr>
<tr><td>7</td><td>ಬೋಧಕ ಆಸ್ಪತ್ರೆಯ ಫಾರ್ಮಸಿ ವಿಭಾಗದಲ್ಲಿ ದಾಸ್ತಾನು ಇಲ್ಲದೆ ಇರುವಂತಹ ಸಂದರ್ಭದಲ್ಲಿ ರೋಗಿಗಳ ಚಿಕಿತ್ಸೆಯ ಹಿತ ದೃಷ್ಟಿಯಿಂದ ತುರ್ತು ಔಷಧಿ ಹಾಗೂ ಇತರೆ ಪರಿಕರಗಳನ್ನು ರೂ.2.42 ಲಕ್ಷಗಳ ವೆಚ್ಚದಲ್ಲಿ ಸ್ಥಳೀಯವಾಗಿ ಖರೀದಿಸಿರುವುದನ್ನು ಅನುಮೋದಿಸುವ ಬಗ್ಗೆ.</td><td>ಸಂಸ್ಥೆಯ ಬೋಧಕ ಆಸ್ಪತ್ರೆಗೆ ಚಿಕಿತ್ಸೆಗೆ ಬರುವ ರೋಗಿಗಳ ಅನುಕೂಲಕ್ಕಾಗಿ ಉಗ್ರಾಣದಲ್ಲಿ ದಾಸ್ತಾನು ಇಲ್ಲದೆ ಇರುವಂತಹ ಸಂದರ್ಭಗಳಲ್ಲಿ ಅತಿ ಅವಶ್ಯವಿದ್ದ ಔಷಧಿ ಹಾಗೂ ಇತರೆ ಪರಿಕರಗಳನ್ನು ಸ್ಥಳೀಯವಾಗಿ ದರಪಟ್ಟಿ ಆಧಾರದಲ್ಲಿ ಪೂರೈಕೆ ಮಾಡಿಕೊಳ್ಳಲಾಗಿದ್ದು ಜನವರಿ–2017 ರಿಂದ ಮಾರ್ಚ್–2017ರವರೆಗೆ ಖರೀದಿಸಿದ ವಿವಿಧ ಬಿಲ್ಲುಗಳ ಒಟ್ಟು ಮೊತ್ತ ರೂ.2,42,783.00 ಗಳಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆ ಮುಂದೆ ಮಂಡಿಸಿದರು.
<table>
<tr><th>ಕ್ರ. ಸಂ.</th><th>ಮಾಹೆ</th><th>ವಿವರಗಳು</th><th>ಪಾವತಿಸಿರುವ ಮೊತ್ತ (ರೂ.ಗಳಲ್ಲಿ)</th><th>ಒಟ್ಟು ಮೊತ್ತ</th></tr>
<tr><td>1</td><td rowspan="3">ಜನವರಿ–2017</td><td>ರಾಸಾಯನಿಕಗಳು</td><td>10,181.00</td><td rowspan="3">19,654.00</td></tr>
<tr><td>2</td><td>ಔಷಧಿಗಳು</td><td>0.00</td></tr>
<tr><td>3</td><td>ಉಪಕರಣ ಹಾಗೂ ಇತರೆ ಪರಿಕರಗಳು</td><td>9,473.00</td></tr>
<tr><td>4</td><td rowspan="3">ಫೆಬ್ರವರಿ–2017</td><td>ರಾಸಾಯನಿಕಗಳು</td><td>14,833.00</td><td rowspan="3">2,00,267.00</td></tr>
<tr><td>5</td><td>ಔಷಧಿಗಳು</td><td>1,83,081.00</td></tr>
<tr><td>6</td><td>ಉಪಕರಣ ಹಾಗೂ ಇತರೆ ಪರಿಕರಗಳು</td><td>2,353.00</td></tr>
<tr><td>7</td><td rowspan="3">ಮಾರ್ಚ್–2017</td><td>ರಾಸಾಯನಿಕಗಳು</td><td>0.00</td><td rowspan="3">22,862.00</td></tr>
<tr><td>8</td><td>ಔಷಧಿಗಳು</td><td>18,463.00</td></tr>
<tr><td>9</td><td>ಉಪಕರಣ ಹಾಗೂ ಇತರೆ ಪರಿಕರಗಳು</td><td>4,399.00</td></tr>
<tr><td colspan="3">ಒಟ್ಟು ಮೊತ್ತ</td><td></td><td>2,42,783.00</td></tr>
</table>
ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರೋಗಿಗಳಿಗೆ ಅವಶ್ಯಕವಿರುವ ಔಷಧಿ ಮತ್ತು ಇತರೆ ಪರಿಕಾರಕಗಳ ದಾಸ್ತಾನುಗಳು ಉಗ್ರಾಣದಲ್ಲಿ ಕೊರತೆಯಾಗದಂತೆ ಮುಂಜಾಗ್ರತೆಯಾಗಿ ಕ್ರಮವಹಿಸುವಂತೆಯೂ ಹಾಗೂ ಅವಶ್ಯಕವಿರುವ ಎಲ್ಲಾ ವಸ್ತುಗಳನ್ನು ಟೆಂಡರ್‌ನಲ್ಲಿ ಅಳವಡಿಸಿಕೊಂಡು ನಿಯಮಾನುಸಾರ ಖರೀದಿಸುವಂತೆ ಸೂಚಿಸಲಾಯಿತು. ರೋಗಿಗಳ ಚಿಕಿತ್ಸಾ ಹಿತದೃಷ್ಟಿಯಿಂದ ತುರ್ತು ಅವಶ್ಯಕತೆ ಮೇರೆಗೆ ಔಷಧಿ ಹಾಗೂ ಇತರೆ ಪರಿಕರಗಳನ್ನು ಸ್ಥಳೀಯವಾಗಿ ದರಪಟ್ಟಿ ಆಧಾರದಲ್ಲಿ ಖರೀದಿಸಿ ಸಂಸ್ಥೆಯ ಯೂಸರ್ಸ್ ನಿಧಿಯಿಂದ ಪಾವತಿರುವುದನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.</td></tr>
</table>

ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| 8 | **ಅಕೌಂಟೆಂಟ್ ಜನರಲ್, ಕರ್ನಾಟಕ ವೃತ್ತ, ಬೆಂಗಳೂರು ರವರ 2014-15 ಮತ್ತು 2015-16ನೇ ಸಾಲಿನ ಅಡಿಟ್ ವರದಿಯಲ್ಲಿ ಸೂಚಿತವಾದ ಅಂಶಗಳ ಬಗ್ಗೆ.** | |

ಅಕೌಂಟೆಂಡ್ ಜನರಲ್, ಕರ್ನಾಟಕ ವೃತ್ತ, ಬೆಂಗಳೂರುರವರು ದಿನಾಂಕ:27-02-2017ರಿಂದ 10-03-2017ರವರೆಗೆ ಸಂಸ್ಥೆಯಲ್ಲಿ ಹಾಜರಿದ್ದ ಹಿಮ್ಸ್ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿರುವ ಎಲ್ಲಾ ವಿಭಾಗಗಳ 2014-15 ಮತ್ತು 2015-16ನೇ ಸಾಲಿನ ಲೆಕ್ಕ-ಪರಿಶೋಧನೆ ನಡೆಸಿ ಅಡಿಟ್ ವರದಿ ಸಲ್ಲಿಸಿರುತ್ತದೆ. ಸದರಿ ಅಡಿಟ್ ವರದಿಯಲ್ಲಿ ಸೂಚಿತವಾಗಿರುವ ಅಂಶಗಳಿಗೆ ಪಾಲನಾ ವರದಿ ಸಲ್ಲಿಸುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.

## SECTION -A

| | | |
|---|---|---|
| I | Incorrect Fixation of Pay: Recoverable amount<br>a)Professor : Rs.47,01,360/-<br>b)Assoc Professor: 35,65,020/- | ಸರ್ಕಾರದ ಆದೇಶ ಸಂಖ್ಯೆ: ಆಕುಕ 4 ಎಂಎಂಸಿ 2010, ಬೆಂಗಳೂರು, ದಿನಾಂಕ:16.12.2011ರ ಆದೇಶದಲ್ಲಿ ಬೋಧಕವರ್ಗದವರಿಗೆ ಎ.ಐ.ಸಿ.ಟಿ.ಇ. ಪರಿಷ್ಕೃತ ವೇತನ ಶ್ರೇಣಿಗಳನ್ನು ವಿಸ್ತರಿಸಿ ಹೊರಡಿಸಿದ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡು ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರುಗಳಿಗೆ ವೇತನ ನಿಗದಿಪಡಿಸಲಾಗಿತ್ತು. ಹೆಚ್ಚುವರಿಯಾಗಿ ಪಾವತಿಸಿರುವ ವೇತನವನ್ನು ಮರುಪಾವತಿ ಮಾಡುವ ಬಗ್ಗೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ಮಾಹಿತಿ ನೀಡಿ, ಹೆಚ್ಚುವರಿಯಾಗಿ ಪಾವತಿಸಿರುವ ಬಾಬ್ತನ್ನು ಕಟಾವು ಮಾಡಲಾಗುತ್ತಿದೆ. ಎಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| II | In correct payment Higher Academic grade pay- Excess payment of Pay Rs. 36,92,000/- plus allowance | ಸಂಸ್ಥೆಯ ಹಿರಿಯ ಸ್ಥಾನಿಯ ವೈದ್ಯರುಗಳಿಗೆ ವೇತನದ ಜೊತೆಗೆ ರೂ.6000.00 ಎ.ಜಿ.ಪಿ ನೀಡುತ್ತಿದ್ದು ಸದರಿ ಆದೇಶವನ್ನು ಸರ್ಕಾರವು ಹಿಂಪಡೆದು ರೂ.2000.00 ಎ.ಜಿ.ಪಿಗೆ ನಿಗದಿಪಡಿಸಿರುತ್ತದೆ. ಸದರಿ ಸರ್ಕಾರದ ಆದೇಶವನ್ನು ಪ್ರಶ್ನಿಸಿ ಸಂಬಂಧಪಟ್ಟ ವೈದ್ಯರುಗಳು ಘನ ಉಚ್ಛ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿದ್ದರಿಂದ ಘನ ಉಚ್ಛನ್ಯಾಯಾಲದ ಅಂತಿಮ ಆದೇಶದ ಷರತ್ತಿಗೆ ಒಳಪಟ್ಟು ರೂ.6000.00 ಎ.ಜಿ.ಪಿ.ಯನ್ನು ಮುಂದುವರೆಸಲಾಗಿರುತ್ತದೆಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| III (i) | Special component plan/ Tribal sub-plan-Non utilization of unspent balance of Rs.719.15 lakhs. | ಸರ್ಕಾರವು ಸಂಸ್ಥೆಗೆ ಎಸ್‌ಸಿಪಿ-ಟಿಎಸ್‌ಪಿ ಯೋಜನೆಯಡಿ ವಾರ್ಷಿಕವಾರು ಅನುದಾನವನ್ನು ಬಿಡುಗಡೆ ಮಾಡಿದ್ದು, 4210 ಅನುದಾನದಲ್ಲಿ ಯಾವುದೇ ಕಾಮಗಾರಿಗಳನ್ನು ಶೇ.23 ಭಾಗದಲ್ಲಿ ಮಾತ್ರ ಎಸ್‌ಸಿಪಿ-ಟಿಎಸ್‌ಪಿ ಅನುದಾನದಲ್ಲಿ ಬಳಸಬಹುದಾಗಿತ್ತು. ಉಳಿದ ಶೇ.77 ಅನುದಾನವನ್ನು ಸಂಸ್ಥೆಯ ಇತರೆ ಅನುದಾನಗಳಿಂದ ಭರಿಸಬೇಕಾಗಿತ್ತು. ಆದರೆ ಕಳೆದ ವರ್ಷಗಳಿಂದ 4210 ಅಡಿ ಸಂಸ್ಥೆಗೆ ಯಾವುದೇ ಪ್ರಮುಖ ಅನುದಾನ ಬಿಡುಗಡೆಯಾಗಿಲ್ಲದ ಪ್ರಯುಕ್ತ ಸದರಿ ಅನುದಾನವನ್ನು ಬಳಸಿಕೊಳ್ಳಲಾಗಿರುವುದಿಲ್ಲ.<br>ಈ ರೀತಿಯ ಸಮಸ್ಯೆಯನ್ನು ಸಂಸ್ಥೆಯ ಆರ್ಥಿಕ ಸಮಿತಿ, ಆಡಳಿತ ಮಂಡಳಿ ಹಾಗೂ ಸರ್ಕಾರದ ಗಮನಕ್ಕೆ ತರಲಾಗಿತ್ತು. ಸದರಿ ಸಮಸ್ಯೆಯನ್ನು ಮನಗಂಡ ಸರ್ಕಾರವು ಆಕುಕ 124 |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | | ವಿಷಯ | ತೀರ್ಮಾನ |
|---|---|---|---|
| | | | ಎಂಪಿಎಸ್ 2014 (ಭಾಗ–1), ಬೆಂಗಳೂರು, ದಿನಾಂಕ:20–11–2014 ರಂದು ಪರಿಷ್ಕೃತ ಮಾರ್ಗಸೂಚಿಗಳನ್ನು ಒಳಗೊಂಡ ಆದೇಶವನ್ನು ಮಾಡಿರುತ್ತದೆ. ಅದರನ್ವಯ 1)Construction of compound wall 2) Acoustics for Lecture Halls 1,2,3,4, 3) Public Toilets for new building 4) Fire fighting wor 350-750 beded new building 5) Auditorium ಕಾಮಗಾರಿಗಳನ್ನು ಕೈಗೊಳ್ಳಲು ದಿನಾಂಕ:05–06–2015 ರಂದು ನಡೆದ 7ನೇ ಕಾಮಗಾರಿ ಸಮಿತಿ, ದಿನಾಂಕ:05–06–2015ರಂದು ನಡೆದ 11ನೇ ಆರ್ಥಿಕ ಸಮಿತಿ ಸಭೆ ಹಾಗೂ ದಿನಾಂಕ:10–06–2015ರಂದು ನಡೆದ 23ನೇ ಆಡಳಿತ ಮಂಡಳಿ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಎಸ್‌ಸಿಪಿ–ಟಿಎಸ್‌ಪಿ ಅನುದಾನದಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಆಕುಕ 76 ಕೆವಿಎಂ 2015, ಬೆಂಗಳೂರು, ದಿನಾಂಕ:26.03.2015 ಮತ್ತು ಸರ್ಕಾರದ ಆದೇಶ ಸಂಖ್ಯೆ: ಆಕುಕ 75 ಕೆವಿಎಂ 2015, ಬೆಂಗಳೂರು, ದಿನಾಂಕ:26.03.2015 ಆದೇಶ ಜಾರಿಗೊಳಿಸಿದ ನಂತರವೇ ರೂ. 613.70 ಲಕ್ಷದಲ್ಲಿ ಸದರಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br>ಎಸ್‌ಸಿಪಿ–ಟಿಎಸ್‌ಪಿ ಬಾಕಿ ಉಳಿದಿರುವ ಅನುದಾನದಲ್ಲಿ ಕಾಲೇಜು ಕಟ್ಟಡದ ಹೊರಭಾಗ ಮತ್ತು ಒಳಭಾಗದ ಪೈಂಟಿಂಗ್ ಮತ್ತು ಟೆರೆಸ್ ವಾಟರ್ ಪ್ರೂಫ್ ಲಿಕೇಜ್ ಕಾಮಗಾರಿಗಳಿಗೆ ರೂ.88.00 ಲಕ್ಷ ಮತ್ತು ವಿದ್ಯಾರ್ಥಿಗಳ ವಸತಿ ನಿಲಯಗಳ ಹೊರಭಾಗ ಮತ್ತು ಒಳಭಾಗದ ಪೈಂಟಿಂಗ್ ಮತ್ತು ಟೆರೆಸ್ ವಾಟರ್ ಪ್ರೂಫ್ ಲಿಕೇಜ್ ಕಾಮಗಾರಿಗಳಿಗೆ ರೂ. 87.50 ಲಕ್ಷ ಹಾಗೂ ವಿದ್ಯಾರ್ಥಿ ನಿಲಯದ ಕಟ್ಟಡ ಕಾಮಗಾರಿಗೆ ರೂ.304.32 ಲಕ್ಷಗಳನ್ನು ಸರ್ಕಾರದ ನಿಯಮಗಳು ಅನುಮೋದನೆಯ ಪ್ರಕಾರವೇ ಬಳಸಿಕೊಳ್ಳಲಾಗುತ್ತದೆ.<br>ಮೇಲ್ಕಂಡ ವಿವರಗಳನ್ವಯ ಸಂಸ್ಥೆಗೆ ಈ ವರೆಗೆ ಬಿಡುಗಡೆಯಾಗಿರುವ ಎಸ್‌ಸಿಪಿ–ಟಿಎಸ್‌ಪಿ ಅನುದಾನವನ್ನು ಸಂಸ್ಥೆಯ ಸಿವಿಲ್ ಸಮಿತಿ, ಆರ್ಥಿಕ ಸಮಿತಿ, ಆಡಳಿತ ಮಂಡಳಿಗಳ ಅನುಮೋನ ಪಡೆದು ನಂತರ ಸರ್ಕಾರದ ಅನುಮೋದನೆಯಂತೆ ಬಳಸಿಕೊಳ್ಳಲಾಗಿರುತ್ತದೆಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | III (ii) | Non-Remittance of accrued Interest Rs.1,12,42,984/- pertaining SCP/TSP to Government | ಸಂಸ್ಥೆಗೆ ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನ ಹಾಗೂ ಬ್ಯಾಂಕ್ ಬಡ್ಡಿಯನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳದೆ ಸರ್ಕಾರದ ಅನುಮತಿ ಪಡೆದು ಯಾವ ಉದ್ದೇಶಕ್ಕೆ ಬಿಡುಗಡೆಯಾಗಿದೆಯೋ ಅದೇ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತದೆಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | | ವಿಷಯ | ತೀರ್ಮಾನ |
|---|---|---|---|
| | III (iii) | Special Component Plan/Tribal sub Plan –Diversion of funds towards civil works –Irregular expenditure of Rs.613.70 lakhs | ಸರ್ಕಾರವು ಸಂಸ್ಥೆಗೆ ಎಸ್‌ಸಿಪಿ–ಟಿಎಸ್‌ಪಿ ಯೋಜನೆಯಡಿ ವಾರ್ಷಿಕವಾರು ಅನುದಾನವನ್ನು ಬಿಡುಗಡೆ ಮಾಡಿದ್ದು, 4210 ಅನುದಾನದಲ್ಲಿ ಯಾವುದೇ ಕಾಮಗಾರಿಗಳನ್ನು ಶೇ.23 ಭಾಗದಲ್ಲಿ ಮಾತ್ರ ಎಸ್‌ಸಿಪಿ–ಟಿಎಸ್‌ಪಿ ಅನುದಾನದಲ್ಲಿ ಬಳಸಬಹುದಾಗಿತ್ತು. ಉಳಿದ ಶೇ.77 ಅನುದಾನವನ್ನು ಸಂಸ್ಥೆಯ ಇತರೆ ಅನುದಾನಗಳಿಂದ ಭರಿಸಬೇಕಾಗಿತ್ತು. ಆದರೆ ಕಳೆದ 3–4 ವರ್ಷಗಳಿಂದ 4210 ಅಡಿ ಸಂಸ್ಥೆಗೆ ಯಾವುದೇ ಪ್ರಮುಖ ಅನುದಾನ ಬಿಡುಗಡೆಯಾಗಿಲ್ಲದ ಪ್ರಯುಕ್ತ ಸದರಿ ಅನುದಾನವನ್ನು ಬಳಸಿಕೊಳ್ಳಲಾಗಿರುವುದಿಲ್ಲ.<br>ಈ ರೀತಿಯ ಸಮಸ್ಯೆಯನ್ನು ಸಂಸ್ಥೆಯ ಆರ್ಥಿಕ ಸಮಿತಿ, ಆಡಳಿತ ಮಂಡಳಿ ಹಾಗೂ ಸರ್ಕಾರದ ಗಮನಕ್ಕೆ ತರಲಾಗಿತ್ತು. ಸದರಿ ಸಮಸ್ಯೆಯನ್ನು ಮನಗಂಡ ಸರ್ಕಾರವು ಆಕುಕ 124 ಎಂಪಿಎಸ್ 2014 (ಭಾಗ–1), ಬೆಂಗಳೂರು, ದಿನಾಂಕ:20–11–2014 ರಂದು ಪರಿಷ್ಕೃತ ಮಾರ್ಗಸೂಚಿಗಳನ್ನು ಒಳಗೊಂಡ ಆದೇಶವನ್ನು ಮಾಡಿರುತ್ತದೆ. ಅದರನ್ವಯ 1)Construction of compound wall 2) Acoustics for Lecture Halls 1,2,3,4, 3) Public Toilets for new building 4) Fire fighting wor 350-750 beded new building 5) Auditorium ಕಾಮಗಾರಿಗಳನ್ನು ಕೈಗೊಳ್ಳಲು ದಿನಾಂಕ:05–06–2015 ರಂದು ನಡೆದ 7ನೇ ಕಾಮಗಾರಿ ಸಮಿತಿ, ದಿನಾಂಕ:05–06–2015ರಂದು ನಡೆದ 11ನೇ ಆರ್ಥಿಕ ಸಮಿತಿ ಸಭೆ ಹಾಗೂ ದಿನಾಂಕ:10–06–2015ರಂದು ನಡೆದ 23ನೇ ಆಡಳಿತ ಮಂಡಳಿ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಎಸ್‌ಸಿಪಿ–ಟಿಎಸ್‌ಪಿ ಅನುದಾನದಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಆಕುಕ 76 ಕೆವಿಎಂ 2015, ಬೆಂಗಳೂರು, ದಿನಾಂಕ:26.03.2015 ಮತ್ತು ಸರ್ಕಾರದ ಆದೇಶ ಸಂಖ್ಯೆ: ಆಕುಕ 75 ಕೆವಿಎಂ 2015, ಬೆಂಗಳೂರು, ದಿನಾಂಕ:26.03.2015 ಆದೇಶ ಜಾರಿಗೊಳಿಸಿದ ನಂತರವೇ ಅಗತ್ಯ ರೂ. 613.70 ಲಕ್ಷದಲ್ಲಿ ಸದರಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲಾಗಿರುತ್ತದೆಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | IV | Procurement of Medicine in contravention to KTPP Act, 1999 since 2005 -06 to 2015-16. | 2013–14ನೇ ಸಾಲಿನಲ್ಲಿ ಸಂಸ್ಥೆಯವತಿಯಿಂದ ರೋಗಿಗಳ ಚಿಕಿತ್ಸೆಗಾಗಿ ಬೇಕಾದ ಔಷಧಿ, ರಾಸಾಯನಿಕ ಹಾಗೂ ಇತರೆ ವಸ್ತುಗಳ ಪೂರೈಕೆಗೆ ಸಂಬಂಧಿಸಿದಂತೆ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಂದ ಪಡೆದ ಬೇಡಿಕೆ ಪಟ್ಟಿಯನ್ನು ಕ್ರೂಢೀಕರಿಸಿ ಅಂತಿಮ ಪಟ್ಟಿಯನ್ನು ಥೆರಾಪಿಟಿಕ್ ಸಮಿತಿಯಲ್ಲಿ ಮಂಡಿಸಿ ಒಪ್ಪಿಗೆ ಪಡೆದು ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮೋದನೆಗಾಗಿ ಸರ್ಕಾರಕ್ಕೆ ಕಡತ ಸಲ್ಲಿಸಿದ ಸಂದರ್ಭದಲ್ಲಿ ಟೆಂಡರ್ ಪ್ರಕ್ರಿಯೆಯಲ್ಲಿ ಕೆಲವು ತಾಂತ್ರಿಕ ಗೊಂದಲಗಳನ್ನು ಗಮನಿಸಿ ಎಲ್ಲಾ ಸ್ವಯತ್ತ ಸಂಸ್ಥೆಗಳಿಗೆ (ಬೀದರ್, ಹಾಸನ, ಮಂಡ್ಯ, |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
| --- | --- | --- |
| | | ಬೆಂಗಳೂರು ಮತ್ತು ಮೈಸೂರು) ಅಗತ್ಯವಿರುವ ಔಷಧಿ, ರಾಸಾಯನಿಕಗಳು ಹಾಗೂ ಇತರೆ ವಸ್ತುಗಳ ಸಂಪೂರ್ಣ ಬೇಡಿಕೆಯನ್ನು ಸರ್ಕಾರದ ಅಧೀನ ಸಂಸ್ಥೆಯಾದ ಕೆ.ಡಿ.ಎಲ್&ಡಬ್ಲ್ಯೂ.ಎಸ್ ನಿಂದ ಪಡೆಯುವಂತೆ ನಿರ್ದೇಶನ ನೀಡಿದ್ದರಿಂದ ಟೆಂಡರ್‌ನ್ನು ರದ್ದು ಪಡಿಸಿ ಅಗತ್ಯ ಔಷಧಿ ಹಾಗೂ ಇತರೆ ವಸ್ತುಗಳನ್ನು ಸರಬರಾಜು ಮಾಡುವಂತೆ ಬೇಡಿಕೆ ಪಟ್ಟಿಯನ್ನು ಕೆ.ಡಿ.ಎಲ್&ಡಬ್ಲ್ಯೂ.ಎಸ್ ಸಂಸ್ಥೆಗೆ ನೀಡಲಾಗಿರುತ್ತದೆ.ಆದರೆ ಕೆ.ಡಿ.ಎಲ್&ಡಬ್ಲ್ಯೂ.ಎಸ್ ಸಂಸ್ಥೆವತಿಯಿಂದ ನಿರೀಕ್ಷಿತ ರೀತಿಯಲ್ಲಿ ಸ್ಪಂದನೆ ಸಿಕ್ಕಿರುವುದಿಲ್ಲ ಹಾಗೂ ಸಕಾಲಕ್ಕೆ ಸರಿಯಾಗಿ ಔಷಧಿ ಸರಬರಾಜಾಗದೆ ಸಂಸ್ಥೆಯಲ್ಲಿ ಸಂಕಷ್ಟವನ್ನು ಎದುರಿಸುವಂತಾಗಿತ್ತು.<br>ಆಸ್ಪತ್ರೆಯ ಉಪಯೋಗಕ್ಕೆ ಬೇಕಾದ ಔಷಧಿ ಹಾಗೂ ಇತರೆ ವಸ್ತುಗಳನ್ನು ಸ್ಥಳೀಯ ಕೆ.ಡಿ.ಎಲ್&ಡಬ್ಲ್ಯೂಎಸ್ ಉಗ್ರಾಣದಲ್ಲಿ ಹಾಗೂ ರಾಜ್ಯದ ಇತರೆ ಜಿಲ್ಲೆಯ ಉಗ್ರಾಣಗಳಲ್ಲಿಯೂ ದಾಸ್ತಾನು ಇಲ್ಲದೆ ಔಷಧಿ ಕೊರತೆ ಉಂಟಾದ್ದರಿಂದ ಕೆ.ಡಿ.ಎಲ್&ಡಬ್ಲ್ಯೂ.ಎಸ್ ಉಗ್ರಾಣದಲ್ಲಿ ದಾಸ್ತಾನು ಇಲ್ಲವೆಂದು ದೃಢೀಕರಣ ಪಡೆದು ನಂತರ ಸಾರ್ವಜನಿಕ ಹಿತದೃಷ್ಟಿಯಿಂದ ಇತರೆ ವೈದ್ಯಕೀಯ ಸ್ವಾಯತ್ತ ಸಂಸ್ಥೆಗಳಲ್ಲಿ ಎಲ್–1 ಆಗಿದ್ದ ಸರಬರಾಜುದಾರರಾಗಿದ್ದವರಿಂದ ಔಷಧಿ, ರಾಸಾಯನಿಕ ಹಾಗೂ ಇತರೆ ವಸ್ತುಗಳನ್ನು ಸರಬರಾಜು ಪಡೆಯಲಾಗಿರುತ್ತದೆ.<br>ಸದರಿ ವಿಳಂಬದ ಬಗ್ಗೆ ಹಾಗೂ ಇದರಿಂದಾಗಿ ಸಂಸ್ಥೆಗೆ ಆಗುತ್ತಿರುವ ಪ್ರತಿಕೂಲ ಪರಿಣಾಮಗಳ ಬಗ್ಗೆ ಕೆ.ಡಿ.ಎಲ್&ಡಬ್ಲ್ಯೂಎಸ್ ಅಧಿಕಾರಿಗಳೊಂದಿಗೆ ಚರ್ಚಿಸಿದಾಗ ಟೆಂಡರ್ ಪ್ರಕ್ರಿಯೆಯನ್ನು ಕಾನೂನು ತೊಡಕುಗಳಿಂದ ಅಂತಿಮಗೊಳಿಸಲಾಗಿಲ್ಲ ಎಂಬ ಮಾಹಿತಿ ತಿಳಿದು ಬಂದ ನಂತರ ಸದರಿ ಮಾಹಿತಿಯನ್ನು ಮಾನ್ಯ ವೈದ್ಯಕೀಯ ಸಚಿವರ ಅವಗಾಹನೆಗೆ ತಂದು ದಿನಾಂಕ:12–04–2016 ರಂದು 14ನೇ ಆರ್ಥಿಕ ಸಮಿತಿ ಸಭೆ ಮತ್ತು ದಿನಾಂಕ:12–07–2016 ರಂದು 27ನೇ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಸಂಸ್ಥೆಯ ಹಂತದಲ್ಲಿಯೇ ನಿಯಮಾನುಸಾರ ಅಲ್ಪಾವಧಿ ಇ–ಟೆಂಡರ್ ಕರೆದು ಅಗತ್ಯ ಔಷಧಿಗಳು, ರಾಸಾಯನಿಕಗಳು ಹಾಗೂ ಇತರೆ ವಸ್ತುಗಳನ್ನು ಸರಬರಾಜು ಮಾಡಿಕೊಳ್ಳಲಾಗಿರುತ್ತದೆ.<br>ದಿನಾಂಕ:05–1–2017ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆ.ಡಿ.ಎಲ್&ಡಬ್ಲ್ಯೂಎಸ್ ನಿಂದ ಔಷಧಿ ಹಾಗೂ ಇತರೆ ವಸ್ತುಗಳು ನಿಗದಿತ ಸಮಯದಲ್ಲಿ ಸರಬರಾಜು ಆಗದಿರುವ ಬಗ್ಗೆ ಕಳೆದ 1½ ವರ್ಷದಿಂದಲೂ ಅತೀವ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರಿಗೆ ತಿಳಿಸಲಾಗಿ ಔಷಧಿ, ರಾಸಾಯನಿಕ ಹಾಗೂ ಇತರೆ ವಸ್ತುಗಳ ಬೇಡಿಕೆಯನ್ನು ಕೆ.ಡಿ.ಎಲ್&ಡಬ್ಲ್ಯೂಎಸ್ ಸಂಸ್ಥೆಯಿಂದ ಹಿಂಪಡೆದು ಸಂಸ್ಥೆಯ ಹಂತದಲ್ಲಿಯೇ ಟೆಂಡರ್ ಮೂಲಕ ಕ್ರಮವಹಿಸಲು ಸೂಚಿಸಿರುತ್ತಾರೆ. |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಮಾನ್ಯ ಸಚಿವರ ಆದೇಶದಂತೆ ದಿನಾಂಕ:14.02.2017ರಂದು 16ನೇ ಆರ್ಥಿಕ ಸಮಿತಿ ಸಭೆ ಮತ್ತು ದಿನಾಂಕ:15-03-2017 ರಂದು 29ನೇ ಆಡಳಿತ ಮಂಡಳಿ ಸಭೆಯಲ್ಲಿ ಸದರಿ ವಿಷಯವನ್ನು ಮಂಡಿಸಿ ಅನುಮೋದನೆ ಪಡೆದು ಇ-ಟೆಂಡರ್ ಕೆ.ಟಿ.ಟಿ.ಪಿ ನಿಯಮಾನುಸಾರ ಪ್ರಕ್ರಿಯೆ ಕೈಗೊಳ್ಳಲಾಗಿದೆ ದಿನಾಂಕ:05-07-2017ರಂದು ತಾಂತ್ರಿಕ ಲಕೋಟೆ ತೆರೆಯಬೇಕಾಗಿರುತ್ತದೆ.<br>ಆದುದರಿಂದ ಮೇಲ್ಕಂಡ ವಿವರಗಳಂತೆ ಸಂಸ್ಥೆಯ ಹಂತದಲ್ಲಿ ಅನ್ಯ ಮಾರ್ಗವಿಲ್ಲದಿದ್ದರಿಂದ ಸಾರ್ವಜನಿಕ ರೋಗಿಗಳ ಹಿತದೃಷ್ಟಿಯಿಂದ ಸ್ವಾಯತ್ತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಲ್-1 ಬಿಡ್‌ದಾರರಿಂದ ಕೆಲವು ಔಷಧಿಗಳನ್ನು ಈ ಹಿಂದೆ ಖರೀದಿಸಲಾಗಿತ್ತಾದರೂ ಕಳೆದ 2 ವರ್ಷಗಳಿಂದ ಕೆ.ಟಿ.ಟಿ.ಪಿ ನಿಯಮಾನುಸಾರ ಅಲ್ಪಾವಧಿಯಲ್ಲಿ ಇ-ಟೆಂಡರ್ ಮೂಲಕ ಹಾಗೂ ಈಗ ಪೂರ್ಣಾವಧಿಗೆ ಕೆ.ಟಿ.ಟಿ.ಪಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆಗಳನ್ನು ನಡೆಸಲಾಗಿದೆ. ಎಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |

**SECTION –B**

| | | |
|---|---|---|
| 1 | Delay in obtaining the Administrative approval for Phase-III, resulted in avoidable hike in construction cost by Rs. 1000.00 lakhs. | ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾನುಸಾರ ಮೆಡಿಕಲ್ ಕಾಲೇಜಿಗೆ ಅವಶ್ಯಕವಿರುವ ಕಾಮಗಾರಿಗಳನ್ನು 3ನೇ ಹಂತದಲ್ಲಿ ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿಯನ್ನು ಪಡೆದು ಸದರಿ ಕಾಮಗಾರಿಗಳ ವೆಚ್ಚವನ್ನು ಸಂಸ್ಥೆಯ ಆಯಾ-ವ್ಯಯ ಮುಂಗಡ ಪತ್ರದಲ್ಲಿ ಸೇರಿಸಿ ಅವಶ್ಯಕವಿರುವ ಅನುದಾನ ಹಾಗೂ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಕಾಲಕಾಲಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಾ ಬರಲಾಗುತ್ತಿದೆ. ಆದರೆ ಸರ್ಕಾರದಿಂದ ಅಗತ್ಯ ಅನುದಾನ ಬಿಡುಗಡೆಯಾಗದಿರುವ ಕಾರಣಗಳಿಂದಾಗಿ 3ನೇ ಹಂತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲವೆಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| 2 | Discrepancy in appointment of non-teaching staff –non release of Annual Increment. | ಸಂಸ್ಥೆಗೆ 2010ರಲ್ಲಿ ಆಯ್ಕೆಯಾದ 307 ಬೋಧಕೇತರ ಸಿಬ್ಬಂದಿಗಳ ನೇಮಕಾತಿಯಲ್ಲಿ ತಕರಾರು ಇರುವುದರಿಂದ ಸದರಿ ನೇಮಕಾತಿಯನ್ನು ಸರ್ಕಾರವು ರದ್ದುಪಡಿಸಿರುತ್ತದೆ. ಸಂಬಂಧಿತ ಸಿಬ್ಬಂದಿಗಳು ಘನ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ತಂದು ತಮ್ಮ ಹುದ್ದೆಗಳಲ್ಲಿ ಮುಂದುವರೆಯುತ್ತಾ ಬಂದಿರುತ್ತಾರೆ. ಘನ ಉಚ್ಚ ನ್ಯಾಯಾಲಯವು ತೆಗೆದುಕೊಳ್ಳುವ ಅಂತಿಮ ತೀರ್ಮಾನದಂತೆ ಕ್ರಮ ವಹಿಸಲಾಗುತ್ತದೆಂಬ ಮಾಹಿತಿಯನ್ನು |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | | ವಿಷಯ | ತೀರ್ಮಾನ |
|---|---|---|---|
| | | | ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | 3 | Non maintenance /improper maintenance of cash book | ಸಂಸ್ಥೆಯಲ್ಲಿ ಆರ್ಥಿಕ ಅಧಿಕಾರಿಗಳ ಹುದ್ದೆ ಖಾಲಿ ಇರುವುದರಿಂದ ಸೂಕ್ತ ಮಾರ್ಗದರ್ಶನಗಳ ಕೊರತೆಯಿಂದಾಗಿ ನಗದು ಪುಸ್ತಕವನ್ನು ಬರೆಯುವುದರಲ್ಲಿ ಕೆಲವೊಂದು ಸಣ್ಣ-ಪುಟ್ಟ ಲೋಪದೋಷಗಳು ಉಂಟಾಗಿರುತ್ತದೆ. ಇದೀಗ ಆರ್ಥಿಕ ಸಮಿತಿ ಸಭೆ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ಹೊರಗುತ್ತಿಗೆ ಆಧಾರದಲ್ಲಿ ಒಬ್ಬರು ಟ್ಯಾಕ್ಸ್ ಕನ್ಸಲ್‌ಟೆಂಟ್‌ನ್ನು ನೇಮಕ ಮಾಡಿಕೊಂಡು ನಗದು ಪುಸ್ತಕವನ್ನು ನಿಯಮಾನುಸಾರ ಕ್ರಮಬದ್ಧವಾಗಿ ಬರೆಯಲಾಗುತ್ತಿದೆ. ಹಾಗೂ ಎಲ್ಲಾ ಲೆಕ್ಕ-ಪತ್ರಗಳನ್ನು ಟ್ಯಾಲಿ ಸಾಫ್ಟ್ ವೇರ್‌ಗೆ ಅಳವಡಿಸಲಾಗುತ್ತಿದೆ. ಸದರಿ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | 4 | Annual physical verification of dead stock | ಸಂಸ್ಥೆಯ ವಿವಿಧ ವಿಭಾಗಗಳಲ್ಲಿರುವ ಅನುಪಯುಕ್ತ ವಸ್ತುಗಳನ್ನು ಒಂದು ಕಡೆ ಸಂಗ್ರಹಿಸಿದ್ದು, ಅವುಗಳನ್ನು ಪರಿಶೀಲಿಸುವ ಸಲುವಾಗಿ ಸಂಸ್ಥೆಯ ಹಂತದಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ನೀಡಿರುವ ವರದಿಯನ್ನು ಆಧರಿಸಿ ರಿಪೇರಿ ಮಾಡಿಸಿ ಬಳಸಲು ಯೋಗ್ಯವಾಗಿರುವ ವಸ್ತುಗಳನ್ನು ರಿಪೇರಿ ಮಾಡಿಸಿ ಮರುಬಳಕೆ ಮಾಡಿಕೊಳ್ಳಲಾಗುತ್ತಿದೆ ಉಳಿದವುಗಳನ್ನು ನಿಯಮಾನುಸಾರ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುತ್ತಿರುತ್ತದೆ. ಸದರಿ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | 5 | Non-remittance of accrued interest under schemes account Rs.5,54,895/- | ವಾಜಪೇಯಿ ಆರೋಗ್ಯ ಶ್ರೀ, ರಾಷ್ಟ್ರೀಯ ಸ್ವಾಸ್ಥ ಭೀಮಾ ಯೋಜನೆ, ಯಶಸ್ವಿನಿ, ಹಾಗೂ ವಿವಿಧ ಆರೋಗ್ಯ ಯೋಜನೆಯಡಿ ರೋಗಿಗಳ ಚಿಕತ್ಸೆಗಾಗಿ ಬಿಡುಗಡೆಯಾಗುವ ಅನುದಾನದ ನಿರ್ವಹಣೆಗೆ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಲಾಗಿದ್ದು ಎಲ್ಲಾ ಖರ್ಚು ವೆಚ್ಚಗಳನ್ನು ಸದರಿ ಖಾತೆಯ ಮೂಲಕವೇ ನಿರ್ವಹಿಸಲಾಗುತ್ತಿದೆ. ಹಾಗೂ ಸದರಿ ಖಾತೆಗೆ ಬ್ಯಾಂಕ್‌ನಿಂದ ಬರುವಂತಹ ಬಡ್ಡಿ ಬಾಬ್ತನ್ನು ಸರ್ಕಾರದ ಅನುಮತಿ ಪಡೆದು ಸದರಿ ಯೋಜನೆಯ ಉದ್ದೇಶಿತಕ್ಕಾಗಿಯೇ ಬಳಸಿಕೊಳ್ಳಲಾಗುತ್ತದೆ ಎಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | 6 | Outstanding balance of Rs.39,71,829.50 in Suvarna Arogya Suraksha Trust (SAST) | ಸಂಸ್ಥೆಯ ಬೋಧಕ ಆಸ್ಪತ್ರೆಗೆ ಚಿಕಿತ್ಸೆಗೆಗಾಗಿ ದಾಖಲಾಗುವ ರೋಗಿಗಳಿಗೆ ಸುವರ್ಣ ಆರೋಗ್ಯ ಟ್ರಸ್ಟ್‌ನಿಂದ ಬಿಡುಗಡೆಯಾಗುವ ಚಿಕಿತ್ಸಾ ವೆಚ್ಚದ ಬಾಬ್ತು ಬಿಡುಗಡೆಯಾಗಲು ವಿಳಂಬವಾದಂತಹ ಸಂದರ್ಭಗಳಲ್ಲಿ ರೋಗಿಗಳ ಹಿತದೃಷ್ಟಿಯಿಂದ ಸಂಸ್ಥೆಯ ಯೂಸರ್ಸ್ ಫಂಡ್‌ನಿಂದ ಚಿಕಿತ್ಸಾ ವೆಚ್ಚವನ್ನು ಭರಿಸಿ ನಂತರ ಸುವರ್ಣ ಆರೋಗ್ಯ ರಕ್ಷಾ ಸಮಿತಿಯಿಂದ |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಬಿಡುಗಡೆಯಾಗುವ ಹಣವನ್ನು ಯೂಸರ್ಸ್ ಫಂಡ್ ಖಾತೆಗೆ ವರ್ಗಾಯಿಸುತ್ತಾ ಬರಲಾಗುತ್ತಿದೆ. ಸದರಿ ರೂ. 39,71,829.50 ಬಾಬ್ತನ್ನು ಯೂಸರ್ಸ್ ಫಂಡ್‌ಗೆ ವರ್ಗಾಯಿಸುವುದಷ್ಟೆ ಬಾಕಿ ಇದ್ದು ಈಗಾಗಲೇ ಈ ಬಾಬ್ತನ್ನು ಯೂಸರ್ಸ್ ಫಂಡ್‌ಗೆ ವರ್ಗಾಯಿಸಲಾಗಿರುತ್ತದೆಂಬ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | 7 Non Conducting of annual physical verification of store articles. | ಸಂಸ್ಥೆಯ ವಿವಿಧ ವಿಭಾಗಗಳಲ್ಲಿರುವ ಉಪಕರಣಗಳು, ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು ಪರಿಶೀಲನೆಯನ್ನು ಆಡಿಟ್ ಆಕ್ಷೇಪಣೆ ಪ್ರಕಾರವೇ ಈಗಾಗಲೇ ಕ್ರಮವಹಿಸಲಾಗಿದ್ದು, ವಿವಿಧ ವಿಭಾಗಗಳ ಮುಖ್ಯಸ್ಥರನ್ನೊಳಗೊಂಡ ಸಮಿತಿಯನ್ನು ರಚಿಸಿ ಸದರಿ ಸಮಿತಿಯ ಮೂಲಕ ಪರಿಶೀಲನೆ ನಡೆಸಲಾಗಿರುತ್ತದೆ. ಸದರಿ ಮಾಹಿತಿಯನ್ನು ಆಡಿಟ್ ಆಕ್ಷೇಪಣೆಗೆ ಉತ್ತರವನ್ನಾಗಿ ನೀಡಬಹುದಾಗಿರುತ್ತದೆ. |
| | ಮಹಾಲೇಖಪಾಲಕರು 2014–15 ಮತ್ತು 2016–17ನೇ ಸಾಲಿನ ಲೆಕ್ಕ–ಪರಿಶೋಧನೆ ನಡೆಸಿ ಆಡಿಟ್ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆಗಳಿಗೆ ಸಂಸ್ಥೆಯಿಂದ ಸಿದ್ದಪಡಿಸಲಾಗಿದ್ದ ಕಂಡಿಕೆವಾರು ಉತ್ತರಗಳನ್ನು ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಒಪ್ಪಿ ಅನುಮೋದಿಸಲಾಯಿತು. ಆಡಿಟ್ ಆಕ್ಷೇಪಣೆಗಳಿಗೆ ಉತ್ತರವನ್ನು ಶೀಘ್ರವಾಗಿ ಮಹಾಲೇಖಪಾಲಕರು ಬೆಂಗಳೂರು ಇವರಿಗೆ ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. | |
| 9 | ಹಿಮ್ಸ್ ಸಂಸ್ಥೆಯ ಕಾಲೇಜು ಕಟ್ಟಡ ಹಾಗೂ ಬಾಲಕ ಮತ್ತು ಬಾಲಕಿಯರ ವಸತಿ ನಿಲಯ ಗಳಿಗೆ ಪೈಂಟಿಂಗ್ ಹಾಗೂ ದುರಸ್ಥಿಗಳ ಕಾಮಗಾರಿಗಳನ್ನು ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಅನುಷ್ಠಾನಗೊಳಿಸಲು ಸಮಾಜಕಲ್ಯಾಣ ಇಲಾಖೆಯಿಂದ ಅನುಮೋದನೆ ದೊರೆತಿರುವ ಬಗ್ಗೆ. | ಹಿಮ್ಸ್ ಸಂಸ್ಥೆಯ ಕಾಲೇಜು ಕಟ್ಟಡ ಮತ್ತು ಬಾಲಕ ಮತ್ತು ಬಾಲಕಿಯರ ವಸತಿನಿಲಯಗಳು 2005–06ನೇ ಸಾಲಿನಲ್ಲಿ ನಿರ್ಮಿಸಿದ ಕಟ್ಟಡಗಳಾಗಿದ್ದು ತದನಂತರ ಯಾವುದೇ ನಿರ್ವಹಣೆಯಾಗದೆ ಕಟ್ಟಡಗಳು ಶಿಥಿಲಗೊಂಡು ಮಳೆಗಾಲದಲ್ಲಿ ನೀರಿನಿಂದ ಸೋರುತ್ತಿದ್ದರಿಂದ ಸದರಿ ಕಟ್ಟಡಗಳನ್ನು ರಿಪೇರಿ ಮಾಡುವ ಬಗ್ಗೆ ಪರಿಶೀಲಿಸಿ ಸದರಿ ಕಾಮಗಾರಿಗೆ ತಗಲುವ ವೆಚ್ಚಕ್ಕೆ ಅಂದಾಜು ಪಟ್ಟಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆ, ಹಾಸನ ಇವರಿಗೆ ಕೋರಲಾಗಿದ್ದ ಹಿನ್ನೆಲೆಯಲ್ಲಿ ಸದರಿ ಇಲಾಖೆಯವರು ಕಟ್ಟಡಗಳನ್ನು ಪರಿಶೀಲಿಸಿ ಕಟ್ಟಡಗಳ ಹೊರಭಾಗ ಮತ್ತು ಒಳಭಾಗದ ಪೈಂಟಿಂಗ್ ಮತ್ತು ಟೆರೆಸ್ ವಾಟರ್ ಪ್ರೂಫ್ ಲಿಕೇಜ್ ಕಾಮಗಾರಿಗೆ 2014–15ನೇ ಸಾಲಿನ ಸಿ.ಎಸ್.ಆರ್. ದರದಂತೆ ಕಾಲೇಜು ಕಟ್ಟಡಕ್ಕೆ ರೂ.88.00 ಲಕ್ಷ ಹಾಗೂ ವಸತಿನಿಲಯ ಕಟ್ಟಡಕ್ಕೆ ರೂ.87.50 ಅಂದಾಜು ಪಟ್ಟಿ ಸಲ್ಲಿಸಿದ್ದು ಸದರಿ ಕಾಮಗಾರಿ ವೆಚ್ಚವನ್ನು ಸಂಸ್ಥೆಗೆ ಎಸ್.ಸಿ.ಪಿ./ಟಿ.ಎಸ್.ಪಿ ಯೋಜನೆಯಡಿ ಬಿಡುಗಡೆಯಾಗಿ ಉಳಿದಿರುವ ಬಾಕಿ ಅನುದಾನವನ್ನು ಬಳಸಿಕೊಂಡು ಸದರಿ ಕಾಮಗಾರಿಗಳನ್ನು ಕೈಗೊಳ್ಳುವುದೆಂದು ಸಂಸ್ಥೆಯ ಆರ್ಥಿಕ ಸಮಿತಿ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಏಕ ಕಡತದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು.<br>ಏತನ್ಮಧ್ಯೆ ಸದರಿ ಕಟ್ಟಡದಲ್ಲಿ ಸಮಸ್ಯೆಗಳು ಇನ್ನು ಉಲ್ಬಣಿಸಿದ್ದು ವಿದ್ಯಾರ್ಥಿಗಳು ಮತ್ತು ವಸತಿನಿಲಯದ ಸಿಬ್ಬಂದಿಗಳಿಂದ ದೂರುಗಳು ಹೆಚ್ಚಾದ್ದರಿಂದ ಮಳೆಗಾಲ ಪ್ರಾರಂಭವಾಗುವುದರೊಳಗೆ ಟೆಂಡರ್ ಕರೆದು ಸದರಿ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ವಿಳಂಬವಾಗುವುದೆಂದು ಪರಿಗಣಿಸಿ 4ಜಿ ಅಡಿಯಲ್ಲಿ ವಿನಾಯಿತಿ ಇರುವ ಸರ್ಕಾರಿ ಸ್ವಾಮ್ಯದ ಏಜೆನ್ಸಿಗಳಾದ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ (ಲ್ಯಾಂಡ್ ಆರ್ಮಿ) ಅಥವಾ ನಿರ್ಮಿತಿ ಕೇಂದ್ರದ ಮೂಲಕ ಕಾಮಗಾರಿಗಳನ್ನು ಕೈಗೊಂಡಲ್ಲಿ ತುರ್ತಾಗಿ ಕಾಮಗಾರಿಗಳನ್ನು ಅನುಷ್ಠಾನ |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | ಗೊಳಿಸಬಹುದಾಗಿದ್ದರಿಂದ ಸಂಸ್ಥೆಯ ಮುಂದಿನ ಆರ್ಥಿಕ ಸಮಿತಿ ಸಭೆ ಮತ್ತು ಆಡಳಿತ ಮಂಡಳಿಯ ಘಟನ್ನೋತ್ತರ ಮಂಜೂರಾತಿಯ ಷರತ್ತಿಗೆ ಒಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಕೋರಲಾಗಿತ್ತು,<br>ಸಂಸ್ಥೆಗೆ ಕಳೆದ ಸಾಲುಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಬಿಡುಗಡೆಗೊಳಿಸಲಾದ ಅನುದಾನದಲ್ಲಿ ರೂ.175.50 ಲಕ್ಷಗಳನ್ನು ಸದರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಳಕೆಮಾಡಿಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯು ಅನುಮೋದನೆ ನೀಡಿರುತ್ತದೆ. ಅದರಂತೆ ಸಂಸ್ಥೆಯ ಆರ್ಥಿಕ ಸಮಿತಿಯ ಸಭೆಯಲ್ಲಿ ವಿಷಯವನ್ನು ಸೇರ್ಪಡೆಗೊಳಿಸುವಂತೆ ಸರ್ಕಾರದಿಂದ ನಿರ್ದೇಶನ ನೀಡಿದ್ದರಿಂದ ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತಂದರು.<br><table><tr><th>ಕ್ರ ಸಂ</th><th>ಕಾಮಗಾರಿಯ ವಿವರ</th><th>ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)</th></tr><tr><td>1</td><td>ಹಿಮ್ಸ್ ಸಂಸ್ಥೆಯ ಕಾಲೇಜು ಕಟ್ಟಡ ಹಾಗೂ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳ ನಿರ್ವಹಣೆ ಕಾಮಗಾರಿಗಳನ್ನು ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.</td><td>175.50</td></tr></table>ಸಂಸ್ಥೆಗೆ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಬಿಡುಗಡೆಗೊಳಿಸಲಾದ ಅನುದಾನದಲ್ಲಿ ರೂ.175.50 ಲಕ್ಷಗಳನ್ನು ಸದರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಳಕೆಮಾಡಿಕೊಳ್ಳಲು ಸಮಾಜ ಕಲ್ಯಾಣ ಇಲಾಖೆಯು ಅನುಮೋದನೆ ನೀಡಿರುವುದರ ಬಗ್ಗೆ ಕೂಲಂಕಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಪ್ರಸ್ತುತ ಎಸ್.ಸಿ.ಪಿ/ಟಿಎಸ್‌ಪಿ ಯೋಜನೆಯಡಿ ಲಭ್ಯವಿರುವ ಅನುದಾನದಲ್ಲಿ ಬಾಲಕ ಮತ್ತು ಬಾಲಕಿಯರ ವಸತಿ ನಿಲಯಗಳ ನಿರ್ವಹಣೆ ಕಾಮಗಾರಿಯನ್ನು ಕೈಗೊಂಡು ಉಳಿದ ಕಾಲೇಜು ಕಟ್ಟಡದ ಕಾಮಗಾರಿಯನ್ನು ಸಂಸ್ಥೆಯ ವಿವಿಧ ಲೆಕ್ಕ-ಶೀರ್ಷಿಕೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಅಗತ್ಯ ಕಾಮಗಾರಿಯನ್ನು ಕೈಗೊಳ್ಳಲಾಗುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರು ಈ ಬಗ್ಗೆ ಹೆಚ್ಚಿನ ಜವಾಬ್ದಾರಿ ವಹಿಸಿ ಕಟ್ಟಡದ ಲಿಕೇಜ್ ಹಾಗೂ ಇತರೆ ರಿಪೇರಿಗಳು ಇದ್ದಲ್ಲಿ ಸರಿಪಡಿಸಿ ನಿರ್ವಹಣೆ ಕೆಲಸವನ್ನು ಉತ್ತಮ ರೀತಿಯಲ್ಲಿ ಕೈಗೊಳ್ಳುವಂತೆ ಸೂಚನೆ ನೀಡಲಾಯಿತು. ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 10 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡಕ್ಕೆ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸುವ ಕಾಮಗಾರಿಗೆ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಕಟ್ಟಡಕ್ಕೆ ಮಳೆ ನೀರು ಸಂಗ್ರಹಿಸಲು ವ್ಯವಸ್ಥೆ ಅಳವಡಿಸುವ ಕಾಮಗಾರಿಗೆ ಅಂದಾಜು ಪಟ್ಟಿ ಸಲ್ಲಿಸುವಂತೆ ಲೋಕೋಪಯೋಗಿ ಇಲಾಖೆಯವರನ್ನು ಕೋರಲಾಗಿದ್ದು, ಸದರಿ ಇಲಾಖೆಯವರು ಕಟ್ಟಡದ ಒಳಭಾಗದಲ್ಲಿ ಒಂದು ಲಕ್ಷ ಲೀಟರ್ ಸಾಮರ್ಥ್ಯ ಸಂಪನ್ನು ನಿರ್ಮಿಸಲು 2015-16ರ ಸಿ.ಎಸ್.ಆರ್. ದರದಂತೆ 17.80 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಯನ್ನು ದಿನಾಂಕ:30-08-2016ರ 15ನೇ ಆರ್ಥಿಕ ಸಮಿತಿ ಮತ್ತು ದಿನಾಂಕ:29-09-2016ರ 28ನೇ ಆಡಳಿತ ಮಂಡಳಿ ಸಭೆಯಲ್ಲಿ |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ಲೋಕೋಪಯೋಗಿ ಇಲಾಖೆಯವರು ಪರಿಷ್ಕೃತ ಅಂದಾಜು ಪಟ್ಟಿ ಸಲ್ಲಿಸಿರುವ ಬಗ್ಗೆ. | ಮಂಡಿಸಿ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ದಿನಾಂಕ:14-02-2017 ಪ್ರಸ್ತಾವನೆ ಸಲ್ಲಿಸಲಾಗಿತ್ತು.<br>ಸರ್ಕಾರದ ಪತ್ರ ಸಂಖ್ಯೆ: ಆಕುಕ 197 ಕೆವಿಎಂ 2014, ದಿನಾಂಕ:22-04-2017 2016-17ನೇ ಸಾಲಿನ ಆರ್ಥಿಕ ವರ್ಷವು ಅಂತ್ಯಗೊಂಡಿರುವುದರಿಂದ ಕಾಮಗಾರಿಯ ವೆಚ್ಚವನ್ನು 2017-18ನೇ ಸಾಲಿಗೆ ಲೆಕ್ಕ-ಶೀರ್ಷಿಕೆ 4210-03-105-1-02 ಸವಿವರ ಲೆಕ್ಕ ಶೀರ್ಷಿಕೆ 386 ನಿರ್ಮಾಣ ಅಡಿ ಬಿಡುಗಡೆಯಾಗುವ ಅನುದಾನದಲ್ಲಿ ಮಳೆನೀರು ಸಂಗ್ರಹ ವ್ಯವಸ್ಥೆ ಅಳವಡಿಸುವ ಕಾಮಗಾರಿಯ ವೆಚ್ಚವನ್ನು ಭರಿಸುವ ಬಗ್ಗೆ ಸಂಸ್ಥೆಯ ಆರ್ಥಿಕ ಸಮಿತಿ ಸಭೆ ಮತ್ತು ಆಡಳಿತ ಮಂಡಳಿಯ ಸಭೆಯಲ್ಲಿಟ್ಟು ತೀರ್ಮಾನ ತೆಗೆದುಕೊಂಡ ನಂತರ ಆಡಳಿತಾತ್ಮಕ ಅನುಮೋದನೆ ಮತ್ತು ಅನುದಾನ ಬಿಡುಗಡೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶನ ಬಂದಿರುವುದರಿಂದ ಸದರಿ ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಸಂಸ್ಥೆಯ ನಿರ್ದೇಶಕರು ಮಂಡಿಸಿದರು.<br>**ಕ್ರಸಂ** \| **ಕಾಮಗಾರಿಯ ವಿವರ** \| **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)**<br>1 \| ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೋರ್ಟ್‌ಯಾರ್ಡ್‌ನಲ್ಲಿ ಬಿದ್ದಂತಹ ಮಳೆ ನೀರನ್ನು 160 ಮಿ.ಮಿ., 140 ಮಿ.ಮಿ. ಮತ್ತು 110 ಮಿ.ಮಿ. ಪಿ.ವಿ.ಸಿ. ಪೈಪುಗಳನ್ನು ಅಳವಡಿಸಿಕೊಂಡು ಮಳೆನೀರನ್ನು ಶುದ್ಧೀಕರಿಸಲು Flush lock and pebble bed filter ಅನ್ನು ಅಳವಡಿಸಿ ನೀರು ಸಂಗ್ರಹಣೆಗಾಗಿ ಒಂದು ಲಕ್ಷ ಲೀಟರ್ ಸಾಮರ್ಥ್ಯದ ಸಂಪನ್ನು ನಿರ್ಮಿಸಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸುವ ಕಾಮಗಾರಿ \| 19.50<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸದರಿ ಕಾಮಗಾರಿಯು ಮಳೆ ನೀರು ಸಂಗ್ರಹಿಸುವಲ್ಲಿ ಪ್ರಮುಖವಾದ ಪಾತ್ರ ವಹಿಸುವುದರಿಂದ ಲೋಕೋಪಯೋಗಿ ಇಲಾಖೆಯವರು ಸಲ್ಲಿಸಿರುವ ಪರಿಷ್ಕೃತ ಅಂದಾಜು ವೆಚ್ಚವನ್ನು ಒಪ್ಪಿ ಸಂಸ್ಥೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಸದರಿ ಕಾಮಗಾರಿಯನ್ನು ನಿಯಮಾನುಸಾರ ಕೈಗೊಂಡು ನಂತರ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಮರುಹೊಂದಾಣಿ ಮಾಡಿಕೊಳ್ಳುವುದೆಂದು ತೀರ್ಮಾನಿಸಿ ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 11 | ಬೋಧಕ ಆಸ್ಪತ್ರೆಯ ರೇಡಿಯಾಲಾಜಿ ವಿಭಾಗಕ್ಕೆ ಹೆಚ್ಚುತ್ತಿರುವ ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ಇಬ್ಬರು ಕ್ಷ-ಕಿರಣ ತಂತ್ರಜ್ಞರುಗಳನ್ನು ಹೊರಗುತ್ತಿಗೆ ಆಧಾರದಲ್ಲಿ | ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಪ್ರಸ್ತುತ 03 ಕ್ಷ-ಕಿರಣ ಯಂತ್ರಗಳು ಹಾಗೂ ಒಂದು 16 ಸ್ಲೈಸ್ ಸಿಟಿ ಸ್ಕ್ಯಾನ್ ಯಂತ್ರಗಳು ಕಾರ್ಯನಿರ್ವಹಿಸುತ್ತಿದ್ದು, ಅತೀ ಶೀಘ್ರದಲ್ಲಿ ಹೆಚ್ಚುವರಿಯಾಗಿ 04 ಕ್ಷ-ಕಿರಣ ಯಂತ್ರಗಳು ಇ-ಟೆಂಡರ್ ಮೂಲಕ ಸರಬರಾಜು ಆಗುವುದರ ಜೊತೆಗೆ ಎಂ.ಆರ್.ಐ ಯಂತ್ರವನ್ನು ಅಳವಡಿಸುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿರುತ್ತದೆ. ರೇಡಿಯಾಲಾಜಿ ವಿಭಾಗದಲ್ಲಿ 06 ತಂತ್ರಜ್ಞರುಗಳು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದು, ದಿನದ 24 ಗಂಟೆ ಕ್ಷ-ಕಿರಣ ಪರೀಕ್ಷಾ ಸೌಲಭ್ಯ ನೀಡುತ್ತಿದ್ದು ಸಿಟಿ ಸ್ಕ್ಯಾನ್ ಪರೀಕ್ಷೆಗೆ ಒಳಪಡುವ ರೋಗಿಗಳಿಗೆ ಬೆಳಿಗ್ಗೆ 9.00 ರಿಂದ 4.00 ಗಂಟೆಯವರೆಗೆ ಮಾತ್ರ ಸೌಲಭ್ಯ ನೀಡಲಾಗುತ್ತಿದೆ. ಹೆಚ್ಚುವರಿಯಾಗಿ 02 ಕ್ಷ-ಕಿರಣ ತಂತ್ರಜ್ಞರನ್ನು ಹೊರಗುತ್ತಿಗೆ |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | ನೇಮಕ ಮಾಡಿಕೊಳ್ಳುವ ಬಗ್ಗೆ. | ಆಧಾರದಲ್ಲಿ ನೇಮಕ ಮಾಡಿಕೊಂಡಲ್ಲಿ ಸಂಸ್ಥೆಗೆ ಸರಬರಾಜಾಗುವ ಅತ್ಯಾಧುನಿಕ ರೇಡಿಯಾಲಾಜಿ ಉಪಕರಣಗಳ ಸದ್ಬಳಕೆ ಮಾಡಿಕೊಂಡು ದಿನದ 24 ಗಂಟೆ ರೇಡಿಯಾಲಜಿ ವಿಭಾಗದ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಒದಗಿಸಿ ಕೊಟ್ಟಂತಾಗುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಸಂಸ್ಥೆಗೆ 58 ತಂತ್ರಜ್ಞರುಗಳ ಹುದ್ದೆ ಮಂಜುರಾಗಿದ್ದು ಈ ಪೈಕಿ 53 ಹುದ್ದೆಗಳು ಭರ್ತಿಯಾಗಿದ್ದು 05 ತಂತ್ರಜ್ಞರ ಹುದ್ದೆಗಳು ಖಾಲಿ ಇರುವುದರಿಂದ ಸದರಿ ತಂತ್ರಜ್ಞ ಹುದ್ದೆಗಳ ಎದುರಿಗೆ ಎರಡು ಕ್ಷ–ಕಿರಣ ತಂತ್ರಜ್ಞರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 12 | ಸಂಸ್ಥೆಯ ವಿವಿಧ ವಿಭಾಗಗಳ ಪೀಠೋಪಕರಣಗಳ ರಿಪೇರಿ ಬಗ್ಗೆ. | ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಮುರಿದುಹೋಗಿದ್ದ ಹಾಗೂ ಅನುಪಯುಕ್ತವೆಂದು ಪರಿಗಣಿಸಲಾಗಿದ್ದ ಪೀಠೋಪಕರಣಗಳು, ಉಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ಶೇಖರಣೆ ಮಾಡಲಾಗಿರುತ್ತದೆ. ಸದರಿ ವಸ್ತುಗಳನ್ನು ರಿಪೇರಿ ಮಾಡಿಸದೆ ಅನುಪಯುಕ್ತ ವಸ್ತುಗಳೆಂದು ಪರಿಗಣಿಸಿದ್ದಲ್ಲಿ ಸದರಿ ವಸ್ತುಗಳ ಬದಲಿಗೆ ಹೊಸ ವಸ್ತುಗಳನ್ನು ಖರೀದಿಸಬೇಕಾಗುತ್ತದೆ ಇದಕ್ಕೆ ತಗಲುವ ವೆಚ್ಚ ಸುಮಾರು ರೂ.12.00 ರಿಂದ 15.00 ಲಕ್ಷವಾಗಬಹುದು ಹಾಲಿ ಮುರಿದು ಹೋಗಿರುವ ಪೀಠೋಪಕರಣಗಳು, ಉಪಕರಣಗಳು ಹಾಗೂ ಇತರೆ ಸಾಮಗ್ರಿಗಳನ್ನು ರಿಪೇರಿ ಮಾಡಿ ಬಣ್ಣ ಬಳಿಸಿ ಮರು ಉಪಯೋಗಕ್ಕೆ ಬಳಸಬಹುದಾಗಿರುತ್ತದೆ. ಸದರಿ ಕೆಲಸಕ್ಕೆ ಅಂದಾಜು ವೆಚ್ಚ ರೂ. 4.82 ಲಕ್ಷಗಳಾಗಲಿದ್ದು, ಈ ವೆಚ್ಚವನ್ನು ಭರಿಸುವ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು. |

| ಕ್ರಮ ಸಂಖ್ಯೆ | ರಿಪೇರಿ ಸಾಮಗ್ರಿಗಳ ವಿವರ | ದರ ಒಂದಕ್ಕೆ | ಪರಿಮಾಣ | ಮೊಬಲಗು |
|---|---|---|---|---|
| 1 | ಗ್ರಾಡ್ರೇಜ್ ಅಲ್‌ಮೇರ ರಿಪೇರಿ | 55 | 4900.00 | 269500.00 |
| 2 | ಅರ್ಥೋ ಟೇಬಲ್ ರಿಪೇರಿ | 1 | 3500.00 | 3500.00 |
| 3 | ಪುಡ್ ಲಾಕರ್ ರಿಪೇರಿ | 19 | 2500.00 | 47500.00 |
| 4 | ಸೈಕಲ್ ವೀಲ್ ಟ್ರಾಲಿ ರಿಪೇರಿ | 4 | 4000.00 | 16000.00 |
| 5 | ರ್‍ಯಾಕ್ ರಿಪೇರಿ | 8 | 2500.00 | 20000.00 |
| 6 | ಮೆಡಿಸನ್ ಟ್ರಾಲಿ ರಿಪೇರಿ | 3 | 1400.00 | 4200.00 |
| 7 | ಟ್ರಾಲಿ ವೀಲ್ ರಿಪೇರಿ | 3 | 600.00 | 1800.00 |
| 8 | ಹೆಡ್ ರೆಸ್ ರಿಪೇರಿ | 1 | 1000.00 | 1000.00 |
| 9 | 3ಸೀಟ್ ಕಾಂಬೀನೇಷನ್ ಚೇರ್ ರಿಪೇರಿ | 3 | 2000.00 | 6000.00 |
| 10 | ಸ್ಕ್ರೀನ್ ಸ್ಟಾಂಡ್ ರಿಪೇರಿ ಗ್ರೈಂಡಿಂಗ್ | 5 | 1500.00 | 7500.00 |
| 11 | ಕಾಟ್ ಟೆಂಡ್ ರಿಮೂವ್ ರಿಪೇರಿ | 2 | 2500.00 | 5000.00 |



ಆರ್ಥಿಕ ಅಧಿಕಾರಿಗಳು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| ಅಜೆಂಡಾ ಕ್ರ ಸಂಖ್ಯೆ | ವಿಷಯ | ತೀರ್ಮಾನ |
|---|---|---|
| | | |

| | | | | |
|---|---|---|---|---|
| 12 | ಡ್ರಿಪ್ ಸ್ಟ್ಯಾಂಡ್ ವೆಲ್ಡಿಂಗ್ ರಿಪೇರಿ | 2 | 600.00 | 1200.00 |
| 13 | ಪೂಟ್ ಗ್ರಿಪ್ಸ್ ಸ್ಟ್ಯಾಂಡ್ ರಿಪೇರಿ | 2 | 750.00 | 1500.00 |
| 14 | ವೀಲ್ ಚೇರ್ ರಿಪೇರಿ | 5 | 6500.00 | 32500.00 |
| 15 | ಅಕ್ಸಿಜನ್ ಟ್ರಾಲಿ ವೀಲ್ | 2 | 1500.00 | 3000.00 |
| 16 | ರಬ್ಬರ್ ವೀಲ್ ರಿಪೇರಿ | 7 | 4000.00 | 28000.00 |
| 17 | ಸ್ಟೀಲ್ ಚೇರ್ ರಿಪೇರಿ | 5 | 400.00 | 2000.00 |
| 18 | ಸ್ಪಾಟ್ ಲಿಫ್ಟಿಂಗ್ | 4 | 6000.00 | 24000.00 |
| 19 | ಲೋಡಿಂಗ್ ಮತ್ತು ಅನ್‌ಲೋಡಿಂಗ್ | 4 | 2000.00 | 8000.00 |
| | **ಒಟ್ಟು** | | | **4,82,200.00** |

ಸದರಿ ವೆಚ್ಚದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ರಿಪೇರಿಯಲ್ಲಿರುವ ವಸ್ತುಗಳ ಬದಲಿಗೆ ಹೊಸದಾಗಿ ವಸ್ತುಗಳನ್ನು ಖರೀದಿಸಿದಲ್ಲಿ ಅಧಿಕ ವೆಚ್ಚವಾಗುತ್ತದೆಂದು ಅಭಿಪ್ರಾಯಿಸಿ ಹಾಲಿ ರಿಪೇರಿಯಲ್ಲಿರುವ ವಸ್ತುಗಳನ್ನು ರಿಪೇರಿ ಮಾಡಿಸಲು ನಿಯಮಾನುಸಾರ ದರಪಟ್ಟಿ ಕರೆದು ಸದರಿ ರಿಪೇರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು.

ಆರ್ಥಿಕ ಅಧಿಕಾರಿಗಳು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ,
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

**ಆರ್ಥಿಕ ಅಧಿಕಾರಿಗಳು**
**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ**

ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.
ಹಾಗೂ ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

**ನಿರ್ದೇಶಕರು**
**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**
**ಹಾಸನ**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಬಹುಮಹಡಿಗಳ ಕಟ್ಟಡ,
ಹಾಗೂ ಅಧ್ಯಕ್ಷರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.